ಶ್ರೀ. ಪ.ವಿ.ವ.ಸಂ.ಸಾ





# ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಮತ್ತು ವ್ಹಿ.ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ

ಸಿಂದಗಿ - 586128

೨೦೨೨-೨೦೨೩

10/10

ತಾ॥ಸಿಂದಗಿ

ಜಿಲ್ಲಾ॥ವಿಜಯಪುರ

## ಕನ್ನಡ ವಿಭಾಗ

## ವಿದ್ಯಾರ್ಥಿಯ ಪ್ರಾಯೋಜಿತ ಕಾರ್ಯ

## ಕನ್ನಡ ಇತಿಹಾಸ ಮತ್ತು ಕನ್ನಡ ಸಾಹಿತ್ಯ

ಮಾರ್ಗದರ್ಶಕರು
ಪ್ರೊ – ಪ್ರತಿಕಾ. ಎಮ್. ತಳವಾರ (ಎಂ.ಎ, ಎಂ.ಎಡ್)

ಇವರಿಂದ,
ಸೌಮ್ಯ ಆರ್. ಹಿಟ್ನಳ್ಳಿ
B.Sc. I sem
Reg no : U15NB22S0088
ಮು: ಪೋ : ಸಿಂದಗಿ
ತಾ॥ ಸಿಂದಗಿ ಜಿ॥ ವಿಜಯಪುರ

Co-ordinator IQAC
Principal,
G.P. Porwal Arts, Comm & V.V. Salimath Sc. College, SINDGI-586128



S.P.V.V.S.S



G.P.PORWAL ARTS, COMMERCE & V.V. SALIMATH SCIENCE COLLEGE

SINDAGI - 586128

2022-2023

Tq :Sindagi Dist :Vijayapur

# Dept, of Kannada

## Student Project Works on

## Kannada Itihas Mattu Kannada Sahitya

**Guided By,**

*Prof - Pratika M. Talawar ( M.A. M.Ed )*


**Submitted By,**

Soumya R. Hitnalli
B.Sc I sem
Reg No : U15NB22S0088
Tq : Sindagi Dist : Vijayapura

# ಪರಿವಿಡಿ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| ೦೧ | ಕರ್ನಾಟಕದ ಬಗ್ಗೆ ಕಿರುಪರಿಚಯ ಮತ್ತು ಕರ್ನಾಟಕ ಪದದ ಅರ್ಥ | ೦೧ |
| ೦೨ | ಕರ್ನಾಟಕ ಇತಿಹಾಸ ಮತ್ತು ಜನಸಂಪರ್ಕ | ೦೨ |
| ೦೩ | ಕರ್ನಾಟಕವನ್ನಾಳಿದ ಅರಸು ಮನೆತನಗಳು<br>೧. ಚಾಲುಕ್ಯರು<br>೨. ಶಾತವಾಹನರು<br>೩. ಕದಂಬರು ಮತ್ತು ಪಶ್ಚಿಮ ಗಂಗರು<br>೪. ಹೊಯ್ಸಳರು<br>೫. ವಿಜಯನಗರ ಸಾಮ್ರಾಜ್ಯ<br>೬. ವಿಜಯಪುರ ಸುಲ್ತಾನರು<br>೭. ಮೈಸೂರು ರಾಜಮನೆತನದವರು | ೦೩-೦೬ |
| ೦೪ | ಕರ್ನಾಟಕ ಏಕೀಕರಣ ಮತ್ತು ಕರ್ನಾಟಕದ ಉದಯ. | ೦೭ |
| ೦೫ | ಕರ್ನಾಟಕದ ಸಂಸ್ಕೃತಿ | ೦೮ |
| ೦೬ | ಕನ್ನಡ ಸಾಹಿತ್ಯದ ಕಿರುಪರಿಚಯ | ೦೯ |
| ೦೭ | ಕನ್ನಡ ಸಾಹಿತ್ಯದ ಕಾಲಘಟ್ಟಗಳು<br>೧. ಇತಿವೃತ್ತ<br>೨. ಹಳಗನ್ನಡ<br>೩. ನಡುಗನ್ನಡ<br>೪. ಮಧ್ಯಕಾಲದ ಸಾಹಿತ್ಯ<br>೫. ಆಧುನಿಕ ಕನ್ನಡ<br>೬. ನವ್ಯಸಾಹಿತ್ಯ ಮತ್ತು ಇತರ ಪ್ರಕಾರಗಳು | ೧೦-೨೮ |
| ೦೮ | ಕನ್ನಡ ಸಾಹಿತ್ಯಕ್ಕೆ ದೊರೆತ ಪ್ರಶಸ್ತಿಗಳು ಮತ್ತು ಹೆಚ್ಚಿನ ಮಾಹಿತಿ. | ೨೯-೩೦ |
| ೦೯ | ಸಂಬಂಧಿತ ಲೇಖನಗಳು ಮತ್ತು ಅಂತರ್ಜಾಲ ತಾಣಗಳು. | ೩೧ |

# ಕರ್ನಾಟಕದ ಇತಿಹಾಸ ಮತ್ತು ಕನ್ನಡ ಸಾಹಿತ್ಯ

## ಕರ್ನಾಟಕ :-

ಕರ್ನಾಟಕವು (ಪೂರ್ವದಲ್ಲಿ ಮೈಸೂರು ರಾಜ್ಯ) ಭಾರತದಲ್ಲಿನ ರಾಜ್ಯ. ಕರ್ನಾಟಕವು ಭಾರತದ ಐದು ಪ್ರಮುಖ ದಕ್ಷಿಣಾತ್ಯಗಳಲ್ಲಿ ಅತಿ ದೊಡ್ಡ ರಾಜ್ಯವು ಹಾಗೂ ದೇಶದ ಆರನೇಯ ದೊಡ್ಡ ರಾಜ್ಯ.

೧೯೭೩ ಕ್ಕೆ ಮೊದಲು ಕರ್ನಾಟಕದ ಹೆಸರು ಮೈಸೂರು ರಾಜ್ಯ ಎಂದಿತ್ತು. ಇದಕ್ಕೆ ಕಾರಣ ಕರ್ನಾಟಕ ಏಕೀಕರಣದ ಮೊದಲ ಸೃಷ್ಟಿ 'ಮೈಸೂರು ಮಹಾಸಂಸ್ಥಾನ'ವನ್ನು ಆಧರಿಸಿದ್ದು (೧೯೫೦ ರಲ್ಲಿ). ೧೯೫೬ ರಲ್ಲಿ ಸುತ್ತ-ಮುತ್ತಲ ರಾಜ್ಯಗಳ ಕನ್ನಡ ಪ್ರಧಾನ ಪ್ರದೇಶಗಳನ್ನು ಸೇರಿಸಲಾಯಿತು.

## ಕರ್ನಾಟಕ ಪದದ ಅರ್ಥ

ಕರ್ನಾಟಕ —> ಕರು + ನಾಡು

↓ ↓

ಕಪ್ಪಾದ ಪ್ರದೇಶ

ಎತ್ತರವಾದ ಪ್ರದೇಶ

ಕರ್ನಾಟಕ ಎಂಬ ಹೆಸರಿಗೆ ಅನೇಕ ವ್ಯುತ್ಪತ್ತಿಗಳು ಪ್ರತಿಪಾದಿಸಲ್ಪಟ್ಟಿವೆ. ಎಲ್ಲಕ್ಕಿಂತ ಹೆಚ್ಚಾಗಿ ಒಪ್ಪಲ್ಪಟ್ಟಿರುವ ವ್ಯುತ್ಪತ್ತಿ ಎಂದರೆ ಕರ್ನಾಟಕ ಎಂಬುದು "ಕರು + ನಾಡು" ಎಂಬುದರಿಂದ ವ್ಯುತ್ಪತ್ತಿಯನ್ನು ಪಡೆದಿದೆ. ಕರುನಾಡು ಎಂದರೆ ಕಪ್ಪು ಮಣ್ಣಿನ ನಾಡು, ಎತ್ತರದ ಪ್ರದೇಶ ಎಂದು ಅರ್ಥ.

# ಕರ್ನಾಟಕದ ಇತಿಹಾಸ

* ಕರ್ನಾಟಕದ ಚರಿತ್ರೆಯನ್ನು ಪೂರ್ವ ಶಿಲಾಯುಗದಷ್ಟು ಹಳೆಯದಾಗಿದೆ. ಕರ್ನಾಟಕದಲ್ಲಿ ಭೂಸಂಶೋಧನೆಯಿಂದ ದೊರೆತಿರುವ ಕೈ-ಕೊಡಲಿಗಳು ಮತ್ತು ಕಡುಗತ್ತಿಗಳು ಪೂರ್ವ ಶಿಲಾಯುಗದ ಕೈ-ಕೊಡಲಿ ಸಂಸ್ಕೃತಿಯ ಇರುವಿಕೆಗೆ ಸಾಕ್ಷಿಯಾಗಿವೆ. ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಯ ಕುರುಹುಗಳು ಕೂಡ ಕರ್ನಾಟಕದಲ್ಲಿ ದೊರೆತಿವೆ.

* ಹರಪ್ಪದಲ್ಲಿ ಭೂಶೋಧನೆಯಿಂದ ದೊರೆತಿರುವ ಚಿನ್ನವು ಕರ್ನಾಟಕದ ಗಣಿಗಳಿಂದ ಆಮದು ಮಾಡಿರುವ ವಿಚಾರದಿಂದ ವಿದ್ವಾಂಸರು ಕ್ರಿ.ಪೂ ೨೦೦೦ದಲ್ಲಿ ಕರ್ನಾಟಕ ಮತ್ತು ಸಿಂಧು ಕಣಿವೆ ನಾಗರೀಕತೆ ನಡುವೆ ಸಂಬಂಧಗಳಿದ್ದವೆಂದು ಪ್ರತಿಪಾದಿಸಿದ್ದಾರೆ. ಕ್ರಿ.ಪೂ 2000 ಕ್ಕಿಂತ ಮೊದಲು ಕರ್ನಾಟಕದ ಬಹುಪಾಲು ಭಾಗ ಸಾಮ್ರಾಟ್ ಅಶೋಕ ಮೌರ್ಯ ಸಾಮ್ರಾಜ್ಯದ ಭಾಗವಾಗಿತ್ತು.

## ಜನಸಂಪರ್ಕ

ಯಾವುದೇ ಭಾಷೆಯ ಸಾಹಿತ್ಯದ ಜನಪ್ರಿಯತೆ ಸುಶಿಕ್ಷಿತ ಮತ್ತು ಆಸಕ್ತ ಜನರಿಂದ ಪಡೆದ ಮನ್ನಣೆಯನ್ನು ಅವಲಂಬಿಸುತ್ತದೆ. ಆದರೆ ಕಾವ್ಯದ ನಿಜವಾದ ಜನಪ್ರಿಯತೆ ತಿಳಿದು ಬರುವುದು ಅದು ಸಾಮಾನ್ಯ ಜನರ ಬಾಯಲ್ಲಿ ನಲಿದಾಗ. ಯಾವುದೇ ಸಾಹಿತ್ಯ ಪ್ರಕಾರಕ್ಕೂ ಸರ್ವಜನಮಾನ್ಯತೆ ಪಡೆಯುವುದು ಕಷ್ಟ. ಕನ್ನಡ ಸಾಹಿತ್ಯದ ಕೆಲವು ಪ್ರಕಾರಗಳು ಇಂತಹ ಮಾನ್ಯತೆಯನ್ನು ಪಡೆದಿವೆ. ಕುಮಾರವ್ಯಾಸನ ಭಾರತ ಇಂದಿಗೂ ಜನಪ್ರಿಯವಾಗಿ ಉಳಿದಿದೆ. ಭಾವಗೀತೆಗಳು ಅನೇಕ ಕನ್ನಡ ಹಾಡುಗಳನ್ನು ಜನಪ್ರಿಯಗೊಳಿಸಿ ಜನರ ಬಾಯಲ್ಲಿ ಓಡಾಡುತ್ತಿವೆ.

## ಕರ್ನಾಟಕವನ್ನಾಳಿದ ಅರಸುಮನೆತನಗಳು

ಕರ್ನಾಟಕದ ಇತಿಹಾಸದ ದಾಖಲೆ ೨೦೦೦ ವರ್ಷಕ್ಕೂ ಹೆಚ್ಚಿನದು. ಹಲವು ಮಹಾ ಸಾಮ್ರಾಜ್ಯಗಳು ಹಾಗೂ ರಾಜವಂಶದವರು ಕರ್ನಾಟಕವನ್ನು ಆಳಿ ಇಲ್ಲಿಯ ಇತಿಹಾಸ, ಸಂಸ್ಕೃತಿ ಹಾಗೂ ಬೆಳವಣಿಗೆಗೆ ಕಾರಣರಾಗಿದ್ದಾರೆ. ಕರ್ನಾಟಕದ ಮೂಲದ ಸಾಮ್ರಾಜ್ಯಗಳ ಪ್ರಭಾವ ಭಾರತದ ಎಲ್ಲಾ ಭಾಗಗಳಲ್ಲೂ ಕಂಡು ಬರುತ್ತದೆ. ಬಂಗಾಳದ ಸೇನ ರಾಜವಂಶ ತಮ್ಮನ್ನು ಕರ್ನಾಟ ಕ್ಷತ್ರಿಯರುಗಳೆಂದು ಕರೆದುಕೊಳ್ಳುತ್ತಿದ್ದರು. ಮಿಥಿಲೆಯ ಕರ್ನಾಟಕರು ಇಂದಿನ ಬಿಹಾರದ ಮೇಲೆ ರಾಜ್ಯ ಆಳುತ್ತಿದ್ದರು. ಅವರು ಕೂಡ ತಮ್ಮನ್ನು ತಾವು ಕರ್ನಾಟವಂಶ ಹಾಗೂ ಕರ್ನಾಟ ಕ್ಷತ್ರಿಯರೆಂದು ಕರೆದುಕೊಳ್ಳುತ್ತಿದ್ದರು. ಮಧ್ಯ ಭಾರತದ ಚಂದಕ ನಾಗರು, ಕಳಿಂಗದ ಗಂಗರು, ಮಾನ್ಯಖೇಟದ ರಾಷ್ಟ್ರಕೂಟರು, ವೆಂಗಿ ಚಾಲುಕ್ಯ, ದೇವಗಿರಿಯ ಯಾದವ ವಂಶ ಇವರೆಲ್ಲರೂ ಕನ್ನಡ ಮೂಲದವರೇ ಆದರೂ ಕ್ರಮೇಣ ಪ್ರಾದೇಶಿಕ ಭಾಷೆಗಳನ್ನು ಪ್ರೋತ್ಸಾಹಿಸಿದರು.

### ೧. ಮೌರ್ಯರು.

ಕ್ರಿ. ಪೂ. ನಾಲ್ಕನೇಯ ಶತಮಾನದಲ್ಲಿ ಮಗಧ ರಾಜ್ಯದ ನಂದ ಸಾರ್ವಭೌಮರ ಕಾಲದಲ್ಲಿ ಅವರ ಪ್ರಭಾವ ಕರ್ನಾಟಕದವರೆಗೆ ಹಬ್ಬಿತ್ತೆಂದು ತಿಳಿಸುವ ಐತಿಹಾಸಿಕ ಮಾಹಿತಿಗಳು ದೊರೆಯುತ್ತವೆ. ಮೌರ್ಯ ವಂಶದ ಸ್ಥಾಪಕನಾದ ಚಂದ್ರಗುಪ್ತ ಕರ್ನಾಟಕದ ಶ್ರವಣಬೆಳಗೊಳದಲ್ಲಿ ತನ್ನ ಗುರುವಿನೊಡನೆ ಬಂದು ನೆಲೆಸಿದುದಾಗಿ ಐತಿಹ್ಯಗಳು ಮಧ್ಯಕಾಲೀನ ಶಾಸನಗಳು ತಿಳಿಸುತ್ತವೆ. ಆತನ ಮೊಮ್ಮಗನಾದ ಅಶೋಕನ ಶಿಲಾಶಾಸನಗಳು ಈ ರಾಜ್ಯದ ಮಸ್ಕಿ, ಕೊಪ್ಪಳ, ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗ ರಾಮೇಶ್ವರಗಳಲ್ಲಿ ದೊರಕಿರುವುದಲ್ಲದೆ ಮಸ್ಕಿಯ ಬಳಿಯ ಸುವರ್ಣಗಿರಿ ಮತ್ತು ಬ್ರಹ್ಮಗಿರಿಯ ಬಳಿಯ ಇಸಿಲ ನಗರಗಳು ಆತನ ಪ್ರಾದೇಶಿಕ ಮುಖ್ಯ ನಗರಗಳಾಗಿದ್ದುವೆಂಬ ಅಂಶವನ್ನು ತಿಳಿಸುತ್ತವೆ. ಇದರಿಂದ ಕರ್ನಾಟಕದ ಬಹುಭಾಗ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದಿತೆಂದು ತಿಳಿದು ಬರುತ್ತದೆ. ಅಶೋಕ ರಾಜ್ಯ ಕಂಚಿಯವರೆಗೂ ಹಬ್ಬಿದ್ದು ಇಡೀ ಕರ್ನಾಟಕ ರಾಜ್ಯ ಅದರಲ್ಲಿ ಸೇರಿತ್ತೆಂಬ ಅಭಿಪ್ರಾಯವಿದೆ.

## ೧. ಶಾತವಾಹನರು.

ಮೌರ್ಯ ಸಾಮ್ರಾಜ್ಯದ ಆದನಂತರ ನಾಲ್ಕು ಶತಮಾನಗಳ ಕಾಲ ಶಾತವಾಹನರು ಕರ್ನಾಟಕದ ಬಹುಪಾಲು ಭಾಗವನ್ನಾಳಿದರು. ಶಾತವಾಹನರ ಅವನತಿಯು ಪ್ರಪ್ರಥಮ ಪ್ರಾದೇಶಿಕ (ಕನ್ನಡ) ಸಾಮ್ರಾಜ್ಯಗಳಾದ ಕದಂಬ ಸಾಮ್ರಾಜ್ಯ ಮತ್ತು ಪಶ್ಚಿಮಗಂಗ ಸಾಮ್ರಾಜ್ಯಗಳ ಸ್ಥಾಪನೆಯಾಯಿತು. ಈ ಸಾಮ್ರಾಜ್ಯಗಳ ಸ್ಥಾಪನೆಯು ಪ್ರದೇಶದ ಸ್ವತಂತ್ರ ರಾಜಕೀಯ ಅಸ್ತಿತ್ವದ ಪ್ರಾದುರ್ಭಾವಕ್ಕೆ ಕಾರಣವಾಯಿತು. ಕದಂಬ ಸಾಮ್ರಾಜ್ಯವು ಮಯೂರವರ್ಮನಿಂದ ಸ್ಥಾಪಿಸಲ್ಪಟ್ಟಿತು.

## ೨. ಕದಂಬರು ಮತ್ತು ಪಶ್ಚಿಮ ಗಂಗರು

ಕದಂಬ ಸಾಮ್ರಾಜ್ಯವು ಮಯೂರವರ್ಮನಿಂದ ಸ್ಥಾಪಿಸಲ್ಪಟಿತು. ಕದಂಬರ ರಾಜಧಾನಿ ಬನವಾಸಿಯಾಗಿತ್ತು. ತಲಕಾಡು ಪಶ್ಚಿಮಗಂಗ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಈ ಸಾಮ್ರಾಜ್ಯಗಳು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಉಪಯೋಗಿಸಿದ ಸಾಮ್ರಾಜ್ಯಗಳಲ್ಲಿ ಮೊದಲನೆಯದವು. ಹಲ್ಮಿಡಿ ಶಾಸನವು ಮತ್ತು ಬನವಾಸಿಯಲ್ಲಿ ದೊರೆತ ಐದನೆಯ ಶತಮಾನದ ತಾಮ್ರದ ನಾಣ್ಯವು ಅದಕ್ಕೆ ಸಾಕ್ಷಿಯಾಗಿವೆ.

ಈ ಸಾಮ್ರಾಜ್ಯಗಳು ನಂತರ ದಖನ್ ಅನ್ನು ಬಹುಪಾಲು ಆಳುತ್ತಿರುವ ಬಾದಾಮಿ ಚಾಲುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ಪಶ್ಚಿಮ ಚಾಲುಕ್ಯರು ತಮ್ಮ ರಾಜಧಾನಿಗಳನ್ನು ಕರ್ನಾಟಕದಲ್ಲಿ ಸ್ಥಾಪಿಸಿದರು. ಪಶ್ಚಿಮ ಚಾಲುಕ್ಯರು ತಮ್ಮ ವಿಶಿಷ್ಟ ಶೈಲಿಯ ವಾಸ್ತುಶಿಲ್ಪ ಮತ್ತು ಕನ್ನಡ ಸಾಹಿತ್ಯಕ್ಕೆ ಆಶ್ರಯ ದಾತರಾಗಿದ್ದರು. ಇವು ೧೨ನೇಯ ಶತಮಾನದ ಹೊಯ್ಸಳ ಕಲೆಗೆ ಪೂರ್ವಗಾಮಿಯಾಗಿದ್ದರು. ಕ್ರಿ.ಶ ೯೯೦-೧೨೧೦ ರವರೆಗೆ ಕರ್ನಾಟಕದ ಕೆಲವು ಪ್ರದೇಶಗಳು ಚೋಳ ಸಾಮ್ರಾಜ್ಯದ ಅಧೀನವಾಗಿತ್ತು.

ಈ ಕಾಲದಲ್ಲಿ ಪಶ್ಚಿಮ ಚಾಲುಕ್ಯರು, ಚೋಳ ಹಾಗೂ ಪೂರ್ವ ಚಾಲುಕ್ಯರು ವಿರುದ್ಧ ನಿರಂತರ ಕಾಳಗದಲ್ಲಿರುತ್ತಿದ್ದರು. ಮೊದಲನೇಯ ಸಹಸ್ರಮಾನದ ಆದಿಯಲ್ಲಿ ಹೊಯ್ಸಳರು ಕರ್ನಾಟಕದಲ್ಲಿ ಪ್ರಬಲರಾದರು.

## ೪. ಹೊಯ್ಸಳರು

ಹೊಯ್ಸಳರ ಕಾಲದಲ್ಲಿ ಸಾಹಿತ್ಯ ಮತ್ತು ವಾಸ್ತುಶಿಲ್ಪ ಉಚ್ಛ್ರಾಯ ಸ್ಥಿತಿಯನ್ನು ತಲುಪಿದವು. ಇದು ವಿಶಿಷ್ಟ ಕನ್ನಡ ಕಾವ್ಯ ಶೈಲಿಗಳ ಉದಯಕ್ಕೆ ಕಾರಣವಾಯಿತು. ಹೊಯ್ಸಳರ ಕಾಲದಲ್ಲಿ ದೇಗುಲಗಳು ಮತ್ತು ಶಿಲ್ಪಗಳು ವೇಸರ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಿಸಲಾಗುತ್ತಿತ್ತು. ಹೊಯ್ಸಳರ ಸಾಮ್ರಾಜ್ಯವು ಆಂಧ್ರಪ್ರದೇಶದ ಮತ್ತು ತಮಿಳುನಾಡಿನಲ್ಲಿ ಕೆಲವು ಪ್ರದೇಶಗಳನ್ನು ತನ್ನ ಆಳ್ವಿಕೆಯಲ್ಲಿ ಒಳಗೊಂಡಿ-ತ್ತು.

## ೫. ವಿಜಯನಗರ ಸಾಮ್ರಾಜ್ಯ

೧೪ನೇಯ ಶತಮಾನದ ಆದಿಯಲ್ಲಿ ಹರಿಹರ ಮತ್ತು ಬುಕ್ಕರಾಯ ವಿಜಯನಗರ ಸಾಮ್ರಾಜ್ಯವನ್ನು ತುಂಗಾ ನದಿ ತೀರದಲ್ಲಿ (ಈಗಿನ ಬಳ್ಳಾರಿ ಜಿಲ್ಲೆ) ಸ್ಥಾಪಿಸಿದರು. ಹೊಸಪಟ್ಟಣ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು.

ವಿಜಯನಗರ ಸಾಮ್ರಾಜ್ಯವು ಶ್ರೀ ಕೃಷ್ಣದೇವರಾಯನ ಕಳಿಂಗ ಯುದ್ಧ 1512-1518: ಸೂರ್ಯವಂಶದ ಒಡೆಯ ರಾಜ ಕ್ಷತ್ರಿಯ ವಂಶಸ್ಥರಾದ ಗಜಪತಿಗಳ ರಾಜ್ಯ ವಿಶಾಲವಾಗಿದ್ದು ಇಂದಿನ ಆಂಧ್ರ ಮತ್ತು ತೆಲಂಗಾಣದ ಪ್ರದೇಶ ಸಂಪೂರ್ಣ ಒರಿಸ್ಸಾವನ್ನು ಒಳಗೊಂಡಿತ್ತು. ಉಮ್ಮತ್ತೂರಿನ ಯಶಸ್ಸಿನಿಂದ ಉತ್ತೇಜಿತನಾದ ಶ್ರೀ ಕೃಷ್ಣದೇವರಾಯನು ಸೂರ್ಯವಂಶದ ಒಡೆಯ ರಾಜು ಕ್ಷತ್ರಿಯ ಗಜಪತಿ ಪ್ರತಾಪರುದ್ರ ದೇವನ ಸ್ವಾಧೀನದಲ್ಲಿದ್ದ ತೆಲಂಗಾಣ ಪ್ರದೇಶದ ತನ್ನ ದೃಷ್ಟಿಯನ್ನು ತಿರುಗಿಸಿದನು. ಎರಡು ಶತಮಾನಗಳ ಕಾಲ ದಕ್ಷಿಣ ಭಾರತದಲ್ಲಿ ಮುಸ್ಲಿಂ ಸಾಮ್ರಾಜ್ಯಗಳ ಮುನ್ನಡೆಗೆ ತಡೆಗೋಡೆಯಾಯಿತು. ೧೫೬೫ರಲ್ಲಿ ತಾಳಿಕೋಟೆಯ ಯುದ್ಧದಲ್ಲಿ ದಖನ್ ಸುಲ್ತಾನರಿಂದ ವಿಜಯನಗರ ಸಾಮ್ರಾಜ್ಯದ ಪತನ ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿ ಭಾರಿ ಬದಲಾವಣೆ

ತಂದಿತು.


## ೬. ವಿಜಯಪುರದ ಸುಲ್ತಾನರು

ಬಹಮನಿ ಸುಲ್ತಾನರ ಪತನದ ನಂತರ ವಿಜಯಪುರದ ಸುಲ್ತಾನರು ಪ್ರಾಬಲ್ಯಕ್ಕೆ ಬಂದು ದಖನ್ ಪ್ರದೇಶವನ್ನು ಆಳುತ್ತಿದ್ದರು. ೧೭ನೇಯ ಶತಮಾನದ ಕೊನೆಯಲ್ಲಿ ವಿಜಯಪುರದ ಸುಲ್ತಾನರು ಮೊಘಲರಿಂದ ಪರಾಭವ ಹೊಂದಿದರು. ಬಹಮನಿ ಮತ್ತು ವಿಜಯಪುರದ ಸುಲ್ತಾನರು ಉರ್ದು ಮತ್ತು ಪರ್ಶಿಯನ್ ಸಾಹಿತ್ಯ ಮತ್ತು ಇಂಡೋ-ಸಾರಾಸೆನಿಕ್ ವಾಸ್ತುಶಿಲ್ಪವನ್ನು ಪ್ರೋತ್ಸಾಹಿಸುತ್ತಿದ್ದರು. ಆದನಂತರದ ಅವಧಿಯಲ್ಲಿ ಉತ್ತರ ಕರ್ನಾಟಕದ ಕೆಲವು ಪ್ರದೇಶಗಳನ್ನು ಹೈದರಾಬಾದಿನ ನಿಜಾಮರು, ಬ್ರಿಟೀಷರು ಹಾಗೂ ಅನ್ಯ ರಾಜರು ಆಳುತ್ತಿದ್ದರು.

## 2. ಮೈಸೂರು ರಾಜಮನೆತನದವರು

ದಕ್ಷಿಣದಲ್ಲಿ ಮೈಸೂರು ರಾಜಮನೆತನದವರು ಕೆಲಕಾಲ ಸ್ವತಂತ್ರವಾಗಿ ಆಳ್ವಿಕೆ ನಡೆಸುತ್ತಿದ್ದರು. ಎರಡನೇಯ ಕೃಷ್ಣರಾಜ ಒಡೆಯರ್ ಅವರ ಮರಣಾನಂತರ ಮೈಸೂರಿನ ಸೇನಾಧಿಪತಿಯಾಗಿದ್ದ ಹೈದರ್ ಅಲಿಯು ಪ್ರದೇಶದ ಆಡಳಿತವನ್ನು ಕೈಗೆ ತೆಗೆದುಕೊಂಡನು. ಹೈದರ ಅಲಿಯ ನಿಧನಾನಂತರ ಅವನ ಪುತ್ರನಾದ ಟಿಪ್ಪು-ಸುಲ್ತಾನನು ಮೈಸೂರಿನ ಅರಸನಾದನು.

ಐರೋಪ್ಯ ವಿಸ್ತರಣೆಯನ್ನು ತಡೆಯಲು ಹೈದರ್ ಅಲಿ ಹಾಗೂ ಟಿಪ್ಪು-ಸುಲ್ತಾನನು ನಾಲ್ಕು ಆಂಗ್ಲೋ-ಮೈಸೂರು ಯುದ್ಧಗಳಲ್ಲಿ ತೊಡಗಿದರು. ನಾಲ್ಕನೇಯ ಹಾಗೂ ಕೊನೆಯ ಆಂಗ್ಲೋ-ಮೈಸೂರು ಯುದ್ಧವು ಟಿಪ್ಪು ಸುಲ್ತಾನನ ಮರಣಕ್ಕೆ ಮತ್ತು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಮೈಸೂರು ರಾಜ್ಯ ಸೇರ್ಪಡೆಗೆ ಕಾರಣವಾಯಿತು. ಬ್ರಿಟಿಷರು ಮೈಸೂರು ರಾಜ್ಯವನ್ನು ಒಡೆಯರ್ ಮನೆತನಕ್ಕೆ ಹಿಂದಿರುಗಿಸಿದರು. ಹಾಗೂ ಬ್ರಿಟಿಷ್ ಸಾಮ್ರಾಜ್ಯದಲ್ಲಿ ರಾಜಪ್ರಭುತ್ವ ಪ್ರದೇಶ ಸ್ಥಾನಮಾನ ನೀಡಿತು.


ಭಾರತ
ಬಂಗಾಳ ಕೊಲ್ಲಿ
ಭಾರತ(೧೯೫೬) ನಕ್ಷೆ ಕೀಲಿ
ಮದ್ರಾಸು ರಾಜ್ಯ
ಆಂಧ್ರ ರಾಜ್ಯ
ಹೈದ್ರಾಬಾದ್ ರಾಜ್ಯ
ಮೈಸೂರು ರಾಜ್ಯ
ಬಾಂಬೆ ರಾಜ್ಯ
ಕೊಚ್ಚಿ ರಾಜ್ಯ
ಕೊಡವ
ಪುದುಚೆರಿ
ಹಿಂದೂ ಮಹಾಸಾಗರ

* ಭಾರತದಾದ್ಯಂತ ಬ್ರಿಟಿಷರ "ಡಾಕ್ಟ್ರಿನ್ ಆಫ್ ಲ್ಯಾಪ್ಸ್" ರಾಜನೀತಿಯ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿದ್ದವು. ಈ ಕಾಲದಲ್ಲಿ ಕರ್ನಾಟಕದಲ್ಲಿ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮುಂತಾದವರು ೧೮೨೦ ರಲ್ಲಿ ಅಂದರೆ ೧೮೫೭ ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಸುಮಾರು ೨ ದಶಕಗಳ ಮುಂಚೆ ಬ್ರಿಟಿಷರ ವಿರುದ್ಧ ದಂಗೆಯೆದ್ದರು. ಆದನಂತರ ಸೂಪಾ, ಬಾಗಲಕೋಟೆ, ಕೋಲಾಪುರ, ನರಗುಂದ, ಹಾಗೂ ದಾಂಡೇಲಿ ಹೀಗೆ ಹಲವೆಡೆಗಳಲ್ಲಿ ದಂಗೆಗಳು ನಡೆಯಿತು.

* ೧೮೫೭ ರ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ನಡೆದ ದಂಗೆಗಳನ್ನು ಮುಂಡರಗಿ ಭೀಮರಾವ್, ಭಾಸ್ಕರ ರಾವ್ ಭಾವೆ, ಹಲಗಲಿ ಬೇಡರು, ವೆಂಕಟಪ್ಪ ನಾಯಕ, ಮುಂತಾದವರು ಮುನ್ನಡೆಸಿದರು. ೧೯ ನೇಯ ಶತಮಾನದ ಅಂತ್ಯದಲ್ಲಿ ಸ್ವಾತಂತ್ರ್ಯ ಚಳುವಳಿಯು ತೀವ್ರವಾಯಿತು. ಕಾರ್ನಾಡ್ ಸದಾಶಿವರಾವ್, ಆಲೂರು ವೆಂಕಟರಾವ್, ಎಸ್. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ನಿಟ್ಟೂರು ಶ್ರೀನಿವಾಸರಾವ್ ಮುಂತಾದವರು ೨೦ನೇಯ ಶತಮಾನದ ಪೂರ್ವಾರ್ಧ -ದವರೆಗೂ ಸ್ವಾತಂತ್ರ್ಯ ಹೋರಾಟವನ್ನು ಮುಂದುವರೆಸಿಕೊಂಡು ಬಂದರು.

## ಕರ್ನಾಟಕದ ಉದಯ

* ಭಾರತದ ಸ್ವಾತಂತ್ರ್ಯದ ನಂತರ ಮೈಸೂರು ಸಂಸ್ಥಾನ ಭಾರತದ ಒಕ್ಕೂಟವನ್ನು ಸೇರಿತು. ಮೈಸೂರು ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ್ 'ರಾಜಪ್ರಮುಖ'ರಾದರು. ಒಡೆಯರ್ ಮನೆತನಕ್ಕೆ ಭಾರತ ಸರ್ಕಾರದಿಂದ ಗೌರವಧನ ೧೯೭೫ ರವರೆಗೆ ಸಂದಾಯವಾಗುತ್ತಿತ್ತು. ಈ ಮನೆತನದ ಸದಸ್ಯರು ಈಗಲು ಅರಮನೆಯ ಒಂದು ಭಾಗದಲ್ಲಿ ವಾಸವಾಗಿದ್ದಾರೆ.

* ಏಕೀಕರಣದ ಚಳುವಳಿಯ ಬಹುಕಾಲದ ಬೇಡಿಕೆಯ ಮೇರೆಗೆ ನವೆಂಬರ ೧ ೧೯೫೬ ರಂದು ರಾಜ್ಯ ಪುನರ್‌ಸಂಘಟನಾ ಕಾಯ್ದೆಗೆ ಅನುಸಾರವಾಗಿ ಮೈಸೂರು ರಾಜ್ಯಕ್ಕೆ ಕೊಡಗು ರಾಜ್ಯ ಹಾಗೂ ಸುತ್ತಲ ಮದ್ರಾಸ್, ಹೈದ್ರಾಬಾದ್ ಮತ್ತು ಬಾಂಬೆ ರಾಜ್ಯಗಳ ಕನ್ನಡ ಪ್ರಧಾನ ಪ್ರದೇಶಗಳು ಸೇರಿ ಏಕೀಕೃತ "ವಿಶಾಲ ಮೈಸೂರು" ಅಸ್ತಿತ್ವಕ್ಕೆ ಬಂದಿತು. ನವೆಂಬರ ೧ ೧೯೭೩ ರಲ್ಲಿ ರಾಜ್ಯದ ಹೆಸರನ್ನು 'ಕರ್ನಾಟಕ' ಎಂದು ಬದಲಾಯಿಸಿತು.

## ಕರ್ನಾಟಕದ ಸಂಸ್ಕೃತಿ -

ಕರ್ನಾಟಕದ ಕೆಲವು ಜನಪ್ರಿಯ ಸಾಂಸ್ಕೃತಿಕ ಕಲೆಗಳು

೧. **ಸಂಗೀತ** - ದಕ್ಷಿಣ ಭಾರತದ ಶಾಸ್ತ್ರೀಯ ಸಂಗೀತ ಪದ್ಧತಿಯಿಂದ ಕರ್ನಾಟಕ ಸಂಗೀತ ಉಗಮವಾದದ್ದು ಕರ್ನಾಟಕದಲ್ಲಿಯೇ. ಕರ್ನಾಟಕದಲ್ಲಿ ಜನಪ್ರಿಯವಾಗಿರುವ ಇತರ ಸಂಗೀತ ರೂಪದಲ್ಲಿ ಭಾವಗೀತೆಗಳು, ಸುಗಮ ಸಂಗೀತ ಮತ್ತು ಚಲನಚಿತ್ರ ಗೀತೆಗಳು ಸೇರಿವೆ.

೨. **ನೃತ್ಯ** - ಭಾರತದ ಶಾಸ್ತ್ರೀಯ ನೃತ್ಯ ಪದ್ಧತಿಗಳಲ್ಲಿ ಹೆಸರಾದ ಭರತನಾಟ್ಯ ಕರ್ನಾಟಕದಲ್ಲಿ ಜನಪ್ರಿಯ. ಕರ್ನಾಟಕದಲ್ಲೇ ವಿಶಿಷ್ಟವಾದ ಒಂದು ನೃತ್ಯಕಲೆ ಯಕ್ಷಗಾನ. ಡೊಳ್ಳು ಕುಣಿತ ಜಾನಪದ ನೃತ್ಯಗಳಲ್ಲಿ ಒಂದು.

ಸಂಸ್ಕೃತಿಯ ಕೇಂದ್ರವಾದ ಕರ್ನಾಟಕ ಮೈಸೂರು, ಹಳೇಬೀಡು, ಬೇಲೂರು ಮುಂತಾದ ಕಮನೀಯ ತಾಣಗಳಿಗೆ ಮನೆಯಾಗಿದೆ.

**ಯಕ್ಷಗಾನ** - ಯಕ್ಷಗಾನ ನೃತ್ಯ ನಾಟಕ ಪ್ರಕಾರವಾದ ಕರಾವಳಿ ಕರ್ನಾಟಕದ ಪ್ರಮುಖ ನಾಟಕೀಯ ರೂಪಗಳಲ್ಲಿ ಒಂದಾಗಿದೆ. ಜಾನಪದ ಹಾಗೂ ಶಾಸ್ತ್ರೀಯ ಸಂಪ್ರದಾಯ ಸಮ್ಮಿಳನ ಯಕ್ಷಗಾನ ಕಲೆಯ ಒಂದು ಅನನ್ಯ ರೂಪ. ಇಂದು ವಸ್ತ್ರಗಳು, ಸಂಗೀತ, ನೃತ್ಯ, ಹಾಡುಗಾರಿಕೆ ಮತ್ತು ಅತ್ಯಂತ ಮುಖ್ಯವಾಗಿ ಸಂವಾದಗಳನ್ನು ಹಾಡುತ್ತಾ ಸಂಯೋಜನೆ ಮಾಡುವ ಕಲೆಯನ್ನು ಒಳಗೊಂಡಿದೆ. ಪ್ರಸಿದ್ಧ ವಿಜೇತ ಪ್ರದರ್ಶಕರಲ್ಲಿ ಶಂಭು ಹೆಗ್ಡೆ, ಚಿಟ್ಟಾಣಿ ರಾಮಚಂದ್ರ ಹೆಗ್ಡೆ ಸೇರಿದ್ದಾರೆ. ಯಕ್ಷಗಾನ ಮತ್ತು ಡೊಳ್ಳು ಕುಣಿತ ಕರ್ನಾಟಕದಲ್ಲಿ ಜನಪ್ರಿಯ ನೃತ್ಯ ರೂಪಗಳಾಗಿದೆ. ಗಮಕ ಕರ್ನಾಟಕ ಸಂಗೀತ ಆಧರಿಸಿರುವ ಒಂದು ಅನನ್ಯ ಸಂಗೀತ ರೂಪ.

# ಕನ್ನಡ ಸಾಹಿತ್ಯ

ಸಾಹಿತ್ಯ ಮನುಷ್ಯನ ಅನೇಕ ಚಟುವಟಿಕೆಗಳಲ್ಲಿ ಒಂದು. ಅದೊಂದನ್ನೆ ಪ್ರತ್ಯೇಕಿಸಿ ನೋಡುವುದು ಸರಿಯಲ್ಲ. ಏಕೆಂದರೆ ಅದು ಇತರ ಚಟುವಟಿಕೆಗಳಲ್ಲಿ ಸದಾ ಸಂಬಂಧವನ್ನು ಹೊಂದಿ ನಡೆದಿರುತ್ತದೆ. ಕರ್ನಾಟಕದ ಇತಿಹಾಸದ ಮಸ್ತರಗಳ-ಲ್ಲಿ ಎಲ್ಲೋ ಒಂದು ಕಡೆ ಮೂಲೆಯಲ್ಲಿ ಸಾಹಿತ್ಯದ ಚಟುವಟಿಕೆಯನ್ನು ಸ್ಪಷ್ಟ ವಿವರಿಸುತ್ತಾರೆ.

ಸಾಹಿತ್ಯ ಚರಿತ್ರೆಯೂ ಮಸ್ತರಗಳಲ್ಲಿ ಇತಿಹಾಸದ ವಿಷಯ ಅಲ್ಲಾಗಿ ತೇಪೆಯಾಗಿ ಬಂದಿರುವುದುಂಟು ಆದರೆ ಹೀಗೆ ಇತಿಹಾಸದ ಮತ್ತು ಸಾಹಿತ್ಯಗಳನ್ನು ಬೇರೆ ಬೇರೆಯಾಗಿ ನೋಡಿದರೆ ನಮಗೆ ಸರಿಯಾದ ಕಲ್ಪನೆ ಬರುವುದಿಲ್ಲ. ಒಂದನ್ನು ಇನ್ನೊಂದರ ಸಹಾಯದಿಂದ ಸ್ಪಷ್ಟಿಪಡಿಸುವ ವಿವರಿಸುವ ಅರ್ಥ ಮಾಡಿಕೊಳ್ಳಲು ಪ್ರಯತ್ನ ಇನ್ನು ಆಗಬೇಕಾಗಿದೆ. ಕರ್ನಾಟಕವನ್ನು ಮೊದಲು ಆಳಿದವರು ಮೌರ್ಯರು. ನಂತರ ಶಾತವಾಹ-ನರು ಮತ್ತು ಪಲ್ಲವರು ಇವರೆಲ್ಲರು ಹೊರಗಿನವರು. ಇದರ ಫಲವಾಗಿ ಮೊದಮೊದಲು ದೊರಕುವ ಶಾಸನಗಳಲ್ಲಿ ಪ್ರಾಕೃತದಲ್ಲಿವೆ.

ಕನ್ನಡ ಸಾಹಿತ್ಯ ಅನೇಕ ಪ್ರಕಾರಗಳಿಂದ ಶ್ರೀಮಂತವಾಗಿದೆ. ಸಾಹಿತ್ಯ ಪ್ರಕಾರದ ಸ್ವರೂಪ, ರಚನೆ ಆಧಾರದ ಮೇಲೆ ಈ ಕೆಳಕಂಡಂತೆ ವಿಂಗಡಿಸಬಹುದು. ಕನ್ನಡ ಸಾಹಿತ್ಯವೇ ಬೇರೆ-ಕನ್ನಡ ಸಾಹಿತ್ಯ ಪ್ರಕಾರಗಳೇ ಬೇರೆ ಆದ್ದರಿಂದ ಕನ್ನಡ ಸಾಹಿತ್ಯಕ್ಕೆ ಬೇರೆ ಶೀರ್ಷಿಕೆ ಕೊಡುವುದೇ ಉಚಿತ. ಅದರಲ್ಲಿ ಪ್ರಾಚೀನ ಸಾಹಿತ್ಯದಿಂದ ಅರ್ವಾಚೀನ ಸಾಹಿತ್ಯ ಎಲ್ಲಾ ವಿಷಯಗಳನ್ನು ಹಾಕಬಹುದು.

## ಸಾಹಿತ್ಯ ಪ್ರಕಾರಗಳು

೧. ಇತಿವೃತ್ತ
೨. ಹಳೆಗನ್ನಡ
೩. ನಡುಗನ್ನಡ
೪. ವಚನ ಸಾಹಿತ್ಯ
೫. ದಾಸ ಸಾಹಿತ್ಯ
೬. ಆಧುನಿಕ ಕನ್ನಡ

### ೧. ಇತಿವೃತ್ತ

ಕನ್ನಡದ ಬರವಣಿಗೆಯ ಪ್ರಪ್ರಥಮ ಉದಾಹರಣೆ ದೊರಕಿರುವುದು ತಾಳಗುಂದದ 'ಸಿಂಹಕಟಾಂಜನ ಶಾಸನ' ದಲ್ಲಿ ಪ್ರಸಿದ್ಧವಾದ ಬಾದಾಮಿ ಶಾಸನಗಳು ಪುರಾತನ ಕನ್ನಡ ಬರವಣಿಗೆಯ ಮತ್ತಷ್ಟು ಉದಾಹರಣೆಗಳನ್ನು ನೀಡುತ್ತವೆ. ಉಪಲಬ್ಧವಾಗಿರುವ ಪ್ರಥಮ ಪುಸ್ತಕವೆಂದರೆ ೯ನೇ ಶತಮಾನದ ಅಮೋಘವರ್ಷ ನೃಪತುಂಗನ ಆಸ್ಥಾನದ ಕವಿಯಾಗಿದ್ದ ಶ್ರೀ ವಿಜಯನ ಈ ಪುಸ್ತಕ ಕನ್ನಡ ಕಾವ್ಯ, ಕನ್ನಡ ನಾಡು ಮತ್ತು ಕನ್ನಡಿಗರ ಬಗ್ಗೆ ಬರೆಯಲ್ಪಟ್ಟ ಸಾರಾಂಶ ಎನ್ನಬಹುದು.

ಇದಕ್ಕೆ ಹಿಂದೆ ಬರೆಯಲ್ಪಟ್ಟ ಕೆಲವು ಕನ್ನಡ ಪುಸ್ತಕಗಳ ಉಲ್ಲೇಖ ಈ ಪುಸ್ತಕದಲ್ಲಿ ಬಂದಿರುವ ಆಧಾರದ ಮೇಲೆ ಕನ್ನಡ ಸಾಹಿತ್ಯದ ಉಗಮ ಸುಮಾರು ಕ್ರಿ.ಶ ೬-೭ ನೇ ಶತಮಾನಗಳಲ್ಲಿ ಆಗಿದ್ದಿರಬಹುದು. ಆದರೆ ಕವಿರಾಜಮಾರ್ಗದ ಹಿಂದಿನ ಯಾವ ಕೃತಿಗಳು ಇದುವರೆಗೆ ದೊರೆತಿಲ್ಲ. ಕನ್ನಡ ಸಾಹಿತ್ಯದ ಚರಿತ್ರೆಯನ್ನು ಮೂರು ಘಟ್ಟವಾಗಿ ವಿಂಗಡಿಸಬಹುದು ಹಳೆಗನ್ನಡ, ನಡುಗನ್ನಡ, ಹೊಸಗನ್ನಡ (ಆಧುನಿಕ ಕನ್ನಡ).

## ೨. ಹಳೆಗನ್ನಡ

ಹಳೆಗನ್ನಡವನ್ನು ರಾಷ್ಟ್ರಕೂಟ ಸಾಹಿತ್ಯವೆಂದೂ ಕರೆಯಲಾಗುವ ಭಾಷೆಯು ೮ ರಿಂದ ೧೧ ನೇ ಶತಮಾನದಲ್ಲಿ ದಕ್ಷಿಣ ಭಾರತ ಮತ್ತು ಮಧ್ಯಭಾರತವನ್ನು ಆಳಿದ ರಾಷ್ಟ್ರಕೂಟ ಕಾಲದಲ್ಲಿ ಪ್ರಚಲಿತವಿದ್ದ ದ್ರಾವಿಡ ಭಾಷೆಗಳಲ್ಲೊಂದು.

ಆ ಕಾಲದ ಆಳ್ವಿಕೆಯು ದಕ್ಷಿಣ ಭಾರತದ ಇತಿಹಾಸದಲ್ಲಿ ಸಾಹಿತ್ಯದ, ಅದರಲ್ಲೂ ಕನ್ನಡ ಸಾಹಿತ್ಯದ ಮಹತ್ವ ಘಟ್ಟವಾಗಿತ್ತು. ಆ ಕಾಲವು ಪ್ರಾಕೃತ ಹಾಗೂ ಸಂಸ್ಕೃತ ಭಾಷೆಯ ಅಂತ್ಯವೆಂದು. ಕನ್ನಡ ಭಾಷೆಯಲ್ಲಿ ರಚಿತವಾದ ಮಹತ್ವದ ಗ್ರಂಥಗಳೇ ಸಾಕ್ಷಿಯಾಗಿವೆ. ಕನ್ನಡದ ಶ್ರೇಷ್ಠ ಕವಿಗಳಿಗೆ ರಾಷ್ಟ್ರಕೂಟರ ದರ್ಬಾರಿನಲ್ಲಿ ಮಹತ್ವದ ಸ್ಥಾನ ದೊರಕಿ. ಕವಿಗಳು ಹಾಗೂ ರಾಜರು ಪದ್ಯ, ಹಿಂದೂ ಗ್ರಂಥ, ಜೈನ ಗ್ರಂಥ (ತೀರ್ಥಂಕರರ)ಗಳು ಶ್ರೇಷ್ಠ ಸಾಹಿತ್ಯಗಳಾಗಿ ಹೊರಹೊಮ್ಮಿದವು.

ಆದಿ ಕವಿ ಪಂಪ, ರನ್ನರ ಕಾಲದಲ್ಲಿ ಬಹಳವಾಗಿ ಪ್ರಚಲಿತವಾಗಿದ್ದ ಈ ಭಾಷೆಯು ಕಾಲಕ್ರಮೇಣ ನಡುಗನ್ನಡವಾಗಿ ಮಾರ್ಪಟ್ಟು ನಂತರ ಕನ್ನಡ ಭಾಷೆಯಾಗಿ ರೂಪುಗೊಂಡಿತು.

ಕನ್ನಡ ಚರಿತ್ರೆಯ ಈ ಘಟ್ಟಕ್ಕೆ ಆದಿ-ಕಾವ್ಯ ಎಂದು ಕರೆಯಬಹುದು.

### ಹಳೆಕನ್ನಡದ ಕವಿಗಳು

**ಪಂಪ** - ವಿಕ್ರಮಾರ್ಜುನ ವಿಜಯ

**ರನ್ನ** - ಗದಾಯುದ್ಧಂ, ಸಾಹಸಭೀಮ ವಿಜಯ

ಶ್ರೀ ವಿಜಯ - ಕವಿರಾಜಮಾರ್ಗ

ನಾಗವರ್ಮ ೧ - ಛಂದೋಂಬುಧಿ


ಈಶ್ವರ ಕವಿ - ಕವಿಜಿಹ್ವಾಬಂಧನ

ಗುಣವರ್ಮ - ಛಂದಸ್ಸಾರ

ವೀರಭದ್ರ - ನಂದಿಛಂದಸ್ಸು

ಶಿವಕೋಟ್ಯಾಚಾರ್ಯ - ವಡ್ಡಾರಾಧನೆ

## 1) ಪಂಪ



ಹಳೆಗನ್ನಡದ ಅತಿ ಪ್ರಸಿದ್ಧ ಕವಿಯೆಂದರೆ ಪಂಪ. ಪಂಪನ ಪಂಪ ಭಾರತ ಹಾಗೂ ವಿಕ್ರಮಾರ್ಜುನ ವಿಜಯ ಇಂದಿಗೂ ಮೇರು ಕೃತಿಯೆಂದು ಪರಿಗಣಿತ-ವಾಗಿದೆ. ಪಂಪ ಭಾರತ ಮತ್ತು ತನ್ನ ಇನ್ನೊಂದು ಮುಖ್ಯ ಕೃತಿಯಾದ ಆದಿಪುರಾಣ ಮೂಲಕ ಪಂಪ ಕನ್ನಡ ಕಾವ್ಯ ಪರಂಪರೆಯ ದಿಗ್ಗಜರಲ್ಲಿ ಒಬ್ಬರಾಗಿದ್ದಾರೆ.

ಪಂಪ ಭಾರತ ಸಂಸ್ಕೃತ ಮಹಾಭಾರತದ ಕನ್ನಡ ರೂಪಾಂತರ. ತನ್ನ ಮಾನವತೆ-ವಾದ ಹಾಗೂ ಗಂಭೀರ ಲೇಖನಶೈಲಿಯ ಮೂಲಕ ಪಂಪ ಕನ್ನಡದ ಅತ್ಯಂತ ಪ್ರಭಾವಶಾಲಿ ಲೇಖಕರಲ್ಲಿ ಒಬ್ಬರಾಗಿದ್ದಾರೆ.

'ಮಾನವ ಕುಲ ತಾನೊಂದೇ ವಲಂ' ಎಂದು ವಿಶ್ವಮಾನವ ತತ್ವವನ್ನು ಸಾರಿದ ಜಗದ ಕವಿ ಪಂಪ.

ಕೃತಿಗಳು - ಆದಿಪುರಾಣ
ವಿಕ್ರಮಾರ್ಜುನ ವಿಜಯ
ಪಂಪ ಭಾರತ

## 1) ಪೊನ್ನ

ಪೊನ್ನನು ಹಳೆಗನ್ನಡದ ಮೂವರು ರತ್ನತ್ರಯರಲ್ಲಿ ಒಬ್ಬನು. ಕನ್ನಡ ಹಾಗೂ ಸಂಸ್ಕೃತಗಳಲ್ಲಿ ಇವನಿಗೆ ಅಪಾರ ಪಾಂಡಿತ್ಯವಿದ್ದುದರಿಂದ ಈತನಿಗೆ 'ಉಭಯ ಚಕ್ರವರ್ತಿ' ಎಂದು ಕರೆಯಲಾಗುತಿತ್ತು. ಈತನು ತನ್ನನು ತಾನು 'ಕುರುಳ್ಗಳ ಸವಣ' ಎಂದು ಕರೆದುಕೊಂಡಿದ್ದಾನೆ.

### ಪೊನ್ನನ ಕೃತಿಗಳು

ಪೊನ್ನನು ೪ ಕಾವ್ಯಗಳನ್ನು ರಚಿಸಿದ್ದಾನೆಂದು ಹೇಳಲಾಗುತ್ತದೆ. ಲಭ್ಯವಿರುವ ಕಾವ್ಯಗಳು ಎರಡು ೧. ಶಾಂತಿಪುರಾಣ ೨. ಜಿನಾಕ್ಷರಮಾಲೆ

'ಭುವನೈಕ ರಾಮಾಭ್ಯುದಯ' ಹಾಗೂ 'ಗತಪ್ರತ್ಯಾಗತ' ಈ ಕಾವ್ಯಗಳು ಲಭ್ಯವಿಲ್ಲ.

### ಶಾಂತಿಪುರಾಣ

ಶಾಂತಿಪುರಾಣಕ್ಕೆ 'ಪುರಾಣ ನಾಮ ಚೂಡಾಮಣಿ' ಎಂಬ ಪರ್ಯಾಯ ನಾಮವಿದೆ. 12 ಆಶ್ವಾಸಗಳಲ್ಲಿ ರಚನೆಯಾಗಿರುವ ಈ ಚಂಪೂ ಕಾವ್ಯ 16 ನೇಯ ತೀರ್ಥಂಕರನಾದ ಶಾಂತಿನಾಥನನ್ನು ಕುರಿತದ್ದು.

### ಜಿನಾಕ್ಷರಮಾಲೆ

36 ಕಂದಪದ್ಯಗಳಿರುವ ಕೃತಿ 'ಕ' ಕಾರದಿಂದ ಹಿಡಿದು 'ಳ' ಕಾರದವರೆಗೆ ಕ್ರಮವಾಗಿ ಒಂದೊಂದು ಪದ್ಯಾಕ್ಷರ ಆರಂಭವಾಗುತ್ತದೆ.

### ಪೊನ್ನನಿಗಿದ್ದ ಬಿರುದುಗಳು -

ಪೊನ್ನನು ಕುರುಳ್ಗಳ್ ಸವಣ ಎಂದು ಕರೆಯುತ್ತಿದ್ದಾರೆ.

ಕವಿಚಕ್ರವರ್ತಿ ಎಂಬ ಬಿರುದನ್ನು ತನ್ನ ಅರಸನಿಂದ ಪಡೆದಿದ್ದನು.

## iii.) ರನ್ನ

ಹಳಗನ್ನಡದ ಮತ್ತೊಬ್ಬ ಹೆಸರಾಂತ ಕವಿ ರನ್ನ. ಕನ್ನಡದ ಕವಿರತ್ನತ್ರಯರಲ್ಲಿ ಒಬ್ಬನಾಗಿದ್ದಾನೆ. ಹಳಗನ್ನಡದ ಮಹತ್ವ ಕವಿ. ಪಂಪನ ಕಿರಿಯ ಸಮಕಾಲೀನನು. ಚಾಲುಕ್ಯರ ಎರಡನೇಯ ತೈಲಪ ಚಕ್ರವರ್ತಿ ಆಹವಮಲ್ಲ ಹಾಗೂ ಅವನ ಮಗ ಸತ್ಯಾಶ್ರಯ ಇರಬೆಡಂಗ ಇವರ ಆಸ್ಥಾನಕವಿಯಾಗಿದ್ದು ಕವಿ ಚಕ್ರವರ್ತಿ ಎಂಬ ಬಿರುದನ್ನು ಪಡೆದನು.

ರನ್ನನ ಪ್ರಮುಖ ಕೃತಿಗಳು ಜೈನ ಧರ್ಮಿಯವಾದ 'ಅಜಿತ ತೀರ್ಥಂಕರ ಪುರಾಣ' ಮತ್ತು 'ಗದಾಯುದ್ಧಂ' ಅಥವಾ 'ಸಾಹಸಭೀಮ ವಿಜಯ' ಇದು ಇಡೀ ಮಹಾಭಾರತದ ಒಂದು ಸಿಂಹಾವಲೋಕನ ದೃಷ್ಟಿ ಮಹಾಭಾರತ ಯುದ್ಧದ ಕೊನೆಯ ದಿನದಲ್ಲಿ ಸ್ಥಿತವಾಗಿದ್ದರೂ. ಸಿಂಹಾವಲೋಕನ ಕ್ರಮದಲ್ಲಿ ಇಡೀ ಮಹಾಭಾರತವನ್ನು ಪರಿಶೀಲಿಸುತ್ತದೆ. ಛಂದಸ್ಸಿನ ದೃಷ್ಟಿಯಿಂದ ಈ ಕಾಲದ ಕಾವ್ಯ ಚಂಪೂ ಶೈಲಿಯಲ್ಲಿದೆ.

### ಕೃತಿಗಳು -

೧. ಅಜಿತಪುರಾಣ
೨. ಸಾಹಸಭೀಮ ವಿಜಯಂ
೩. ಚಕ್ರೇಶ್ವರ ಚರಿತ
೪ ಪರಶುರಾಮ ಚರಿತ
೫ ರನ್ನ ಕಂದ

### ಬಿರುದುಗಳು

ಕವಿ ಚಕ್ರವರ್ತಿ
ಕವಿರತ್ನ
ಕವಿರಾಜಶೇಖರ
ಕವಿ ತಿಲಕ
ಕವಿಜನ ಚೂಡಾರತ್ನ
ಅಭಿನವ ಚಕ್ರವರ್ತಿ

## 2. ನಡುಗನ್ನಡ

ನಡುಗನ್ನಡದ ಸಾಹಿತ್ಯದಲ್ಲಿ ಅನೇಕ ಹೊಸ ಸಾಹಿತ್ಯ ಪ್ರಕಾರಗಳು ಬೆಳಕಿಗೆ ಬಂದವು. ಇವುಗಳಲ್ಲಿ ಮುಖ್ಯವಾದವು ರಗಳೆ, ಸಾಂಗತ್ಯ ಮತ್ತು ದೇಸಿ. ಈ ಕಾಲದ ಸಾಹಿತ್ಯ ಜೈನ, ಹಿಂದೂ ಹಾಗೂ ಜಾತ್ಯಾತೀತ ಬೋಧನೆಗಳ ಮೇಲೆ ಆಧಾರಿತವಾಗಿವೆ. ಈ ಘಟ್ಟದ ಪ್ರಮುಖ ಲೇಖಕರಲ್ಲಿ ಇಬ್ಬರೆಂದರೆ ಹರಿಹರ ಮತ್ತು ರಾಘವಾಂಕ. ಇಬ್ಬರೂ ತಮ್ಮದೇ ಶೈಲಿಯಲ್ಲಿ ಕನ್ನಡ ಸಾಹಿತ್ಯದ ದಾರಿಯನ್ನು ಬೆಳಗಿದವರು.

### i. ಹರಿಹರ

ಹರಿಹರ 'ರಗಳೆಕವಿ' ಎಂದೇ ಪ್ರಸಿದ್ಧನಾಗಿದ್ದಾನೆ. ಹನ್ನೆರಡನೇಯ ಶತಮಾನದ ಬಹು ಮಹತ್ವದ ಶರಣ ಚಳುವಳಿ ಮತ್ತು ವಚನ ಸಾಹಿತ್ಯದ ಪ್ರಭಾವವು ಹರಿಹರನ ಮೇಲೆ ದಟ್ಟವಾಗಿದೆ. ಮೂಲತಃ ಆತನು ಭಕ್ತ ಕವಿ. ಅಂತೆಯೇ ಆತನ ಶಿವಗಣದ ರಗಳೆಗಳಲ್ಲಿ ಶಿವಶರಣರ ಶಿವಭಕ್ತಿಯ ಉಜ್ವಲ ಚಿತ್ರಣವಿದೆ.


**ಹರಿಹರನ ಕೃತಿಗಳು**

ಗಿರಿಜಾ ಕಲ್ಯಾಣ ಎಂಬ ಚಂಪೂ ಕಾವ್ಯ
ಪಂಪಾಶತಕ
ರಕ್ಷಾ ಶತಕ
ಮುಡಿಗೆಯ ಅಷ್ಟಕ

**ಹರಿಹರನ ರಗಳೆಗಳು**

1. ಬಸವರಾಜದೇವರ ರಗಳೆ
2. ತಿರುನೀಲಕಂಠದೇವರ ರಗಳೆ
3. ನಂಬಿಯಣ್ಣನ ರಗಳೆ
4. ಮಹಾದೇವಿಯಕ್ಕನ ರಗಳೆ
5. ಪ್ರಭುದೇವರ ರಗಳೆ
6. ಕುಂಬಾರ ಗುಂಡಯ್ಯನ ರಗಳೆ
7. ಮಾದಾರ ಚೆನ್ನಯ್ಯನ ರಗಳೆ
8. ಇಳೆಯಾಂಡ ಗುಡಿಮಾರನ ರಗಳೆ
9. ರೇವಣಸಿದ್ಧೇಶ್ವರ ರಗಳೆಗಳು

# ii. ರಾಘವಾಂಕ



ರಾಘವಾಂಕ ತನ್ನ ಆರು ಕೃತಿಗಳ ಮೂಲಕ ಷಟ್ಪದಿ ಛಂದಸ್ಸನ್ನು ಜನಪ್ರಿಯಗೊಳಿಸಿದನು. ಅವನ ಮುಖ್ಯ ಕೃತಿ 'ಹರಿಶ್ಚಂದ್ರ ಕಾವ್ಯ' ಪೌರಾಣಿಕ ಪಾತ್ರವಾದ ಹರಿಶ್ಚಂದ್ರನ ಜೀವನವನ್ನು ಕುರಿತದ್ದು. ಈ ಕೃತಿ ಸಹ ತನ್ನ ತೀವ್ರವಾದ ಮಾನವತಾವಾದಕ್ಕೆ ಪ್ರಸಿದ್ಧವಾಗಿದೆ. ಕನ್ನಡ ಸಾಹಿತ್ಯದಲ್ಲಿ ಶೈಲಿಯ ಷಟ್ಪದಿ ಛಂದಸ್ಸನ್ನು ಜನಪ್ರಿಯಗೊಳಿಸಿದ ಕೀರ್ತಿ ರಾಘವಾಂಕನಿಗೆ ಸಲ್ಲುತ್ತದೆ. ಹರಿಶ್ಚಂದ್ರ ಕಾವ್ಯ ಷಟ್ಪದಿ ಛಂದಸ್ಸಿನಲ್ಲಿ ರಾಜ ಹರಿಶ್ಚಂದ್ರನ ಜೀವನದ ಮೇಲೆ ಇತರರಿಗಿಂತ ಭಿನ್ನವಾದ ವ್ಯಾಖ್ಯಾನದೊಂದಿಗೆ ಬರೆಯಲಾಗಿದೆ ಎಂದು ತಿಳಿಯಬರುತ್ತದೆ.

## ಮಹಾಕಾವ್ಯ ಬರಹಗಳು

* ಹರಿಶ್ಚಂದ್ರ ಕಾವ್ಯ
* ಸಿದ್ಧರಾಮ ಚರಿತ್ರೆ
* ಸೋಮನಾಥ ಚರಿತ್ರ
* ವೀರೇಶ್ವರ ಚರಿತ
* ಹರಿಹರ ಮಹತ್ವ
* ಶರಭ ಚರಿತ್ರೆ

# iii. ಜನ್ನ



ನಡುಗನ್ನಡ ಕಾಲದ ಇನ್ನೊಬ್ಬ ಪ್ರಸಿದ್ಧ ಜೈನ ಕವಿ ಜನ್ನ. ತನ್ನ ಕೃತಿಗಳಾದ ಯಶೋಧರ ಚರಿತೆ ಮತ್ತು ಅನಂಥನಾಥ ಪುರಾಣಗಳ ಮೂಲಕ ಜೈನ ಸಂಪ್ರದಾಯದ ಬಗ್ಗೆ ಬರೆದರು. ಇದೇ ಕಾಲದ ಕನ್ನಡ ವ್ಯಾಕರಣದ ಬಗೆಗಿನ ಮುಖ್ಯ ಕೃತಿ 'ಕೇಶಿರಾಜನ ಶಬ್ಧಮಣಿ ದರ್ಪಣಂ'

## ಜನ್ನನ ರಚನೆಗಳು

ಜನ್ನನು ಕ್ರಿ.ಶ ೧೨೦೯ ರಲ್ಲಿ ಯಶೋಧರ ಚರಿತ್ರೆಯನ್ನು ರಚಿಸಿದನು.

ಜನ್ನನ ಎರಡನೇಯ ರಚನೆ ಅನಂಥನಾಥ ಪುರಾಣ ಜೈನರ ೧೪ ನೇಯ ತೀರ್ಥಂಕರನಾದ ಅನಂತಸ್ವಾಮಿಯ ಜೀವನಚರಿತ್ರೆಯನ್ನು ಕುರಿತದ್ದು.

## iv. ಕುಮಾರವ್ಯಾಸ

ಕುಮಾರವ್ಯಾಸ ಕನ್ನಡದ ಅತ್ಯುನ್ನತ ಕವಿಗಳಲ್ಲಿ ಒಬ್ಬ. ಕನ್ನಡ ಸಾಹಿತ್ಯ ದಿಗ್ಗಜರಲ್ಲಿ ಒಬ್ಬ ಎಂದರೆ ತಪ್ಪಾಗಲಾರದು. ಕುಮಾರ ವ್ಯಾಸರ ಮೂಲ ಹೆಸರು ಗದುಗಿನ ನಾರಣಪ್ಪ ಇವರ ಕಾವ್ಯನಾಮ ಕುಮಾರ ವ್ಯಾಸ. ವ್ಯಾಸ ಮಹರ್ಷಿಯ ಸಂಸ್ಕೃತ ಮಹಾಭಾರತದ ಅತ್ಯದ್ಭುತ ಕನ್ನಡ ರೂಪವನ್ನು ರಚಿಸಿದ್ದರಿಂದ ನಾರಣಪ್ಪ ಕುಮಾರ ವ್ಯಾಸನಾಗಿದ್ದಾನೆ.

ಕುಮಾರ ವ್ಯಾಸನ ಜೀವನ ಕೃತಿ 'ಕರ್ನಾಟ ಭಾರತ ಕಥಾಮಂಜರಿ' ಇದು ಮಹಾಭಾರತದ ಮೊದಲ ಹತ್ತು ಪರ್ವಗಳನ್ನು ಅತ್ಯದ್ಭುತ ಶೈಲಿಯಲ್ಲಿ ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ. ಅದು ಕೇವಲ ರೂಪಾಂತರವಲ್ಲ ಅನೇಕ ಕವಿ ಸಮಯದಿಂದ ಕೂಡಿದ್ದು.

ಕುಮಾರವ್ಯಾಸ ಎಲ್ಲಕ್ಕಿಂತ ಹೆಚ್ಚಾಗಿ ತನ್ನ ರೂಪಕಾಲಂಕಾರ ಬಳಕೆಗಾಗಿ ಪ್ರಸಿದ್ಧನಾಗಿದ್ದಾನೆ. ಇದರಿಂದಾಗಿಯೇ 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದಿಗೂ ಪಾತ್ರನಾಗಿದ್ದಾನೆ. ಕುಮಾರವ್ಯಾಸನು ಹುಡುಕಿ ನೋಡುವ ಮಾನವ ಭಾವಗಳ ವ್ಯಾಪ್ತಿ ಆತನ ಕಾವ್ಯದ ವೈವಿಧ್ಯತೆ ಮತ್ತು ಶಬ್ದಭಂಡಾರ ಜನರನ್ನು ಬೆರಗುಗೊಳಿಸುತ್ತದೆ.

ಕುವೆಂಪುರವರು ಕುಮಾರವ್ಯಾಸನನ್ನು ಕುರಿತು

ಕುಮಾರವ್ಯಾಸ ಹಾಡಿದನೆಂದರೆ<br>
ಕಲಿಯುಗ ದ್ವಾಪರವಾಗುವುದು<br>
ಭಾರತ ಕಣ್ಣಲಿ ಕುಣಿಯುವುದು<br>
ಮೈಯಲಿ ಮಿಂಚಿನ ಹೊಳೆ ತುಳುಕಾಡುವುದು ಎಂದಿದ್ದಾರೆ.

ಪಂಪ ಕಲಿತವರ ಪಾಲಿನ ಕಲ್ಪವೃಕ್ಷವಾದರೆ ಕುಮಾರವ್ಯಾಸ ಕಲಿಯದವರ ಪಾಲಿನ ಕಾಮಧೇನು.


## ೫. ವಚನ ಸಾಹಿತ್ಯ

ವಚನಗಳು ಎಂದು ಸಾಮಾನ್ಯವಾಗಿ ಕರೆಯುವ ಲಿಂಗಾಯತ ಶರಣರ ವಚನಗಳು. ವಚನಗಳು ಮುಕ್ತ ಛಂದಸ್ಸಿನಲ್ಲಿವೆ. ಬಸವೇಶ್ವರ , ಅಕ್ಕಮಹಾದೇವಿ, ಅಲ್ಲಮಪ್ರಭು ಮೊದಲಾದವರು. ವಚನಗಳನ್ನು ಶಾಸ್ತ್ರೀಯ ಸಂಗೀತದಲ್ಲಿ ಅಳವಡಿಸಿ ಮಲ್ಲಿಕಾರ್ಜುನ ಮನಸೂರ ಮೊದಲಾದ ಹಿಂದುಸ್ತಾನಿ ಸಂಗೀತಗಾರರು ಹಾಡಿದ್ದಾರೆ. ಶರಣರ ನಂತರದ ಕೆಲವು ಸರ್ವಜ್ಞರ ವಚನಗಳು ಮಾತ್ರ ಪ್ರಚಲಿತದಲ್ಲಿವೆ.

ವಚನಗಳು ಅಂದಿನ ಕಾಲದ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಬಗೆಗಿನ ಯೋಚನೆಧಾರೆಗಳು. ಇನ್ನು ಮುಖ್ಯವಾಗಿ ವಚನ ಸಾಹಿತ್ಯ ಅಂದಿನ ಸಾಮಾಜಿಕ ಕ್ರಾಂತಿಯ ಬಗ್ಗೆ ಕನ್ನಡಿ ಹಿಡಿಯುತ್ತದೆ. ಬಸವಣ್ಣನವರಿಂದ ಆರಂಭವಾದ ಈ ಕ್ರಾಂತಿ ಜಾತಿ, ಮತ, ಧರ್ಮಗಳ ಯೋಚನೆಗಳ ಕ್ರಾಂತಿಕಾರಿ ಮರು-ಪರಿಶೀಲನೆಗೆ ದಾರಿ ಮಾಡಿಕೊಟ್ಟಿತು.

ವಚನ ಸಾಹಿತ್ಯದಿಂದ ಬಂದ ಮುಖ್ಯ ಬೋಧನೆಗಳೆಂದರೆ ಕಾಯಕವೇ ಕೈಲಾಸ ಕಾಯಕವೇ ಮತ್ತು ಆಧ್ಯಾತ್ಮಿಕತೆಯ ಬಗ್ಗೆ ಹೊಸ ನೋಟ. ವಚನ ಸಾಹಿತ್ಯದ ಪ್ರಮುಖ ಹರಿಕಾರರೆಂದರೆ ಬಸವೇಶ್ವರ , ಅಲ್ಲಮಪ್ರಭು ಮತ್ತು ಕನ್ನಡದ ಮೊದಲ ಮಹಿಳಾ ಲೇಖಕಿಯಾದ ಅಕ್ಕಮಹಾದೇವಿ ಇವರಲ್ಲದೆ ದೇವರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಹೇಮರಡ್ಡಿ ಮಲ್ಲಮ್ಮ ಇನ್ನು ಮೊದಲಾದ ವಚನಕಾರರು ವಚನ ಸಾಹಿತ್ಯಕ್ಕೆ ಉತ್ತಮ ಕಾಣಿಕೆ ನೀಡಿದ್ದಾರೆ.

# 1. ಬಸವಣ್ಣ




ಬಸವಣ್ಣ ಭಾರತದ ೧೨ನೇ ಶತಮಾನದ ಕನ್ನಡದ ಒಬ್ಬ ತತ್ವಜ್ಞಾನಿ, ಕಲಚೂರಿ ಅರಸ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು ಮತ್ತು ಸಾಮಾಜಿಕ ಸುಧಾರಕರಾಗಿದ್ದರು. ಬಸವಣ್ಣ ವಚನಗಳ ಮೂಲಕ ಸಾಮಾಜಿಕ ಅರಿವು ಹರಡಿದರು, ಬಸವಣ್ಣ ಲಿಂಗ, ಸಾಮಾಜಿಕ ತಾರತಮ್ಯ, ಮೂಢನಂಬಿಕೆಗಳು ನಿರಾಕರಿಸಿದರು.


ಬಸವೇಶ್ವರರು ಹನ್ನೆರಡು ವರ್ಷಗಳ ಕಾಲ ಕೂಡಲ ಸಂಗಮದಲ್ಲೇ ಅಧ್ಯಯನ ಮಾಡುತ್ತಾ ಕಳೆದರು.

ಬಸವಣ್ಣ ತಮ್ಮ ವಚನಗಳ ಮೂಲಕ ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ, ಅಯ್ಯ ಎಂದರೆ ಸ್ವರ್ಗ ಎಲವೋ ಎಂದರೆ ನರಕ ಎಂದು ಸಾರುವ ಮೂಲಕ ತಮ್ಮ ಮನುಕುಲಕ್ಕೆ ಸಾಹಿತ್ಯದ ಸ್ಪರ್ಶ ನೀಡಿದರು.

ಕನ್ನಡ ಸಾಹಿತ್ಯಕ್ಕೆ ವಚನಗಳ ಮೂಲಕ ಅಪೂರ್ವ ಕೊಡುಗೆ ಅವರ ಇದುವರೆಗೆ ಸುಮಾರು 1500 ವಚನಗಳನ್ನು ಸಂಗ್ರಹಿಸಿಡಲಾಗಿದೆ.

ಅಂಕಿತನಾಮ - ಕೂಡಲಸಂಗಮ ದೇವ

# ॥ ಅಲ್ಲಮಪ್ರಭು





ಅಲ್ಲಮ ಪ್ರಭು ೧೨ನೇಯ ಶತಮಾನದ ವಚನಕಾರರಲ್ಲಿ ಪ್ರಸಿದ್ಧರಾದವರು. ಅತ್ಯಂತ ನೇರ ನಿಷ್ಠುರವಾದಿ. ಅನೇಕ ಶಿವಶರಣರಿಗೆ, ಶಿವಶರಣೆಯರಿಗೆ ಭಕ್ತಿ-ವೈರಾಗ್ಯವನ್ನು ಬೋಧಿಸಿದರು. ತನ್ನ ವಚನಗಳ ಮೂಲಕ ಅಂತರಂಗ ಬಹಿರಂಗವನ್ನು ಶೋಧಿಸಲೆತ್ನಿಸಿದರು

ಅಲ್ಲಮಪ್ರಭು ಸ್ವಯಂ ಮತ್ತು ಶಿವನ ಏಕೀಕೃತ ಪ್ರಜ್ಞೆಯನ್ನು ಪ್ರಚಾರ ಮಾಡಿದರು ಈ ಏಕತೆಯನ್ನು ವ್ಯಕ್ತಪಡಿಸಲು ಕಾವ್ಯವನ್ನು ಬಳಸಿದರು. ಅಲ್ಲಮ್ಮನ ಕಾವ್ಯ ಮತ್ತು ಆಧ್ಯಾತ್ಮವು "ತೀವ್ರವಾಗಿ ವೈಯಕ್ತಿಕವಾಗಿ ಮತ್ತು ಪ್ರಯೋಗಾತ್ಮಕವಾಗಿದೆ.

ಅಂಕಿತನಾಮ - **ಗುಹೇಶ್ವರಾ**

## iii. ಅಕ್ಕಮಹಾದೇವಿ




ಅಕ್ಕಮಹಾದೇವಿ ವಚನ ಸಾಹಿತ್ಯದ ಪ್ರಮುಖರಲ್ಲೊಬ್ಬರು. ಅಕ್ಕಮಹಾದೇವಿ ಕನ್ನಡದ ಪ್ರಥಮ ಮಹಿಳಾ ಕವಯಿತ್ರಿಯಾಗಿದ್ದಾರೆ. ಅಕ್ಕಮಹಾದೇವಿಯನ್ನು ಶರಣರ ಚಳುವಳಿಯ ಪ್ರಮುಖರಾಗಿ, ಸ್ವಾಭಿಮಾನದ ಪ್ರತೀಕವಾಗಿ, ಸ್ತ್ರೀವಾದಿ ಚಳುವಳಿಯ ನಿಜವಾದ ಪ್ರತಿಪಾದಕಿಯಾಗಿ, ಅಕ್ಕರೆಯ ಅಕ್ಕನಾಗಿ ಗುರುತಿಸಬಹುದು. ಸಾಕ್ಷಾತ್ ಶಿವ (ಮಲ್ಲಿಕಾರ್ಜುನ) ನನ್ನು ಪತಿ ಎಂದು ಸ್ವೀಕರಿಸಿ, ಲೌಕಿಕ ಜಗತ್ತನ್ನು ಧಿಕ್ಕರಿಸಿ, ಕೇಶಾಂಬರೆಯಾಗಿ ನಡೆದ ಅಕ್ಕಮಹಾದೇವಿ ಹಲವಾರು ಯುವತಿಯರಿಗೆ ಮಾದರಿ.

ಅಂಕಿತ ನಾಮ - **ಚೆನ್ನಮಲ್ಲಿಕಾರ್ಜುನ**

ಇದಕ್ಕೆ ಪ್ರಸಿದ್ಧ - ಯೋಗಾಂಗ ತ್ರಿವಿಧಿ, ಸೃಷ್ಟಿಯ ವಚನ ಮಂತ್ರಗೋಪ್ಯ ಮತ್ತು ಇತರೆ ವಚನಗಳು.

## ೪.II ದಾಸ ಸಾಹಿತ್ಯ

ದಾಸ ಸಾಹಿತ್ಯ (ಭಕ್ತಿ ಸಾಹಿತ್ಯ) ೧೩ ನೇ ಶತಮಾನದಲ್ಲಿ ಆರಂಭಗೊಂಡ ಭಕ್ತಿ ಪಂಥದ ಹರಿದಾಸರಿಂದ ವಿರಚಿತವಾದದ್ದು. ಈ ಪದ್ಯಗಳಿಗೆ ಸಾಮಾನ್ಯವಾಗಿ 'ಪದ'ಗಳೆಂದು ಹೆಸರು. ಇವು ಭಗವಂತನಲ್ಲಿ ಒಂದಾಗ ಬಯಸುವ ಭಕ್ತನ ಭಾವವನ್ನು ಪ್ರತಿಬಿಂಬಿಸುತ್ತವೆ. ಈ ಸಾಹಿತ್ಯ ಸಂಗೀತದೊಂದಿಗೆ ನಿಲುಕದೆ.

ದಾಸ ಸಾಹಿತ್ಯದ ಪದ್ಧತಿಗಳಲ್ಲೊಂದಾದ ಕರ್ನಾಟಕ ಸಂಗೀತಕ್ಕೆ ಬುನಾದಿಯಾಗಿದೆ. ದಾಸರ ಪದಗಳಿಗೆ ದೇವರನಾಮಗಳೆಂದು ಹೆಸರು ಈ ಪ್ರಕಾರದ ಮುಖ್ಯ ಕನ್ನಡ ಕವಿಗಳೆಂದರೆ ಪುರಂದರ ದಾಸ(೧೪೮೪ - ೧೫೬೪) ಮತ್ತು ಕನಕದಾಸ (೧೫೦೯ - ೧೬೦೯). ಇವರನ್ನು ದಾಸ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಕರೆಯಲಾಗಿದೆ. ಪುರಂದರದಾಸರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂದು ಕರೆಯುತ್ತಾರೆ.

ದಾಸ ಸಾಹಿತ್ಯ ಭಗವಾನ್ ವಿಷ್ಣು ಅಥವಾ ಅವನ ಅವತಾರಗಳ ಮೇಲೆ ಭಕ್ತರು ರಚಿಸಿದ ಭಕ್ತಿ ಚಳುವಳಿಯ ಸಾಹಿತ್ಯವಾಗಿದೆ. ಕನ್ನಡದಲ್ಲಿ ದಾಸ ಅಕ್ಷರಶಃ ಸೇವಕ ಮತ್ತು ಸಾಹಿತ್ಯವೆಂದರೆ ಸಾಹಿತ್ಯ ಎಂದರ್ಥ. ಪುರಂದರದಾಸರು ಗಣಪತಿ (ಗಜವದನ ಬೇಡುವೆ), ಶಿವ (ಚಂದ್ರ ಚೂಡ ಶಿವಶಂಕರ) ಮತ್ತು ಸರಸ್ವತಿ (ಕೊಡುಬೇಗ ದಿವ್ಯಮತಿ ಸರಸ್ವತಿ) ಸ್ತುತಿ ಗೀತೆಗಳನ್ನು ರಚಿಸಿದ್ದಾರೆ.


# i. ಪುರಂದರದಾಸ



ಪುರಂದರದಾಸರು **ಕರ್ನಾಟಕ ಸಂಗೀತ ಪಿತಾಮಹ** ಎಂದು ಖ್ಯಾತರಾಗಿದ್ದಾರೆ. ಶಾಸ್ತ್ರೀಯ ಸಂಗೀತವನ್ನು ಶ್ರೀ ಸಾಮಾನ್ಯನಿಗೆ ಪರಿಚಯ ಮಾಡಿಕೊಡಲು ಯತ್ನಿಸಿದ ಪುರಂದರದಾಸರು ಮಾಯಾಮಾಳವಗೌಳ ರಾಗದಿಂದ ಹಿಡಿದು ಹೊಸಬರಿಗೆ ಶಾಸ್ತ್ರೀಯ ಸಂಗೀತವನ್ನು ಕಲಿಸಿ ಕೊಡುವ ದಾರಿಯ ಬಗ್ಗೆ ಯೋಚಿಸಿದರು.

ಅವರ ಹರಿಭಕ್ತಿ ಹಾಗೂ ಸಂಗೀತದಲ್ಲಿನ ಪಾಂಡಿತ್ಯ ಕನ್ನಡ ಸಾಹಿತ್ಯದಲ್ಲೇ ವಿಶಿಷ್ಟ ಸ್ಥಾನವನ್ನು ಪಡೆದು ದಾಸ ಸಾಹಿತ್ಯವನ್ನು ಶ್ರೀಮಂತವಾಗಿಸಿವೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಪಿತಾಮಹರಾದ ಪುರಂದರದಾಸರ ಸಾಧನೆಯನ್ನು ಕಂಡ ಸರ್ವರೂ 'ದಾಸರೆಂದರೆ ಪುರಂದರದಾಸರಯ್ಯಾ...!' ಎಂದು ಕೊಂಡಾಡಿದ್ದಾರೆ. ಇವರ ಎಲ್ಲ ಕೀರ್ತನೆಗಳು ಕನ್ನಡ ಭಾಷೆಯಲ್ಲಿದ್ದು, ಭಕ್ತಿ ಮಾರ್ಗವನ್ನು ಜನಸಾಮಾನ್ಯರಿಗೆ ಪರಿಚಯ ಮಾಡಿಕೊಡುವ ಉದ್ದೇಶವನ್ನು ಹೊಂದಿವೆ.

# ೧೧. ಕನಕದಾಸ




ಶ್ರೀ ಕನಕದಾಸರು ಕರ್ನಾಟಕದಲ್ಲಿ ೧೫-೧೬ನೇಯ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ಕನಕದಾಸರು ದಂಡನಾಯಕರಾಗಿದ್ದು ಯುದ್ಧವೊಂದರಲ್ಲಿ ಸೋತ ಅವರಿಗೆ ಉಪರತಿ/ವೈರಾಗ್ಯ ಉಂಟಾಗಿ ಹರಿಭಕ್ತರಾದರಂತೆ. ಕನಕದಾಸರು ಸಾಹಿತ್ಯದ ವಿವಿಧ ಪ್ರಕಾರಗಳಿಂದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿರುವುದಲ್ಲದೆ ಸಂಗೀತ ಪ್ರಪಂಚಕ್ಕೆ ಅನನ್ಯವೇ ಎನ್ನುವಂತಹ ಕೊಡುಗೆಗಳನ್ನು ಮುಂಡಿಗೆಗಳ ರೂಪದಲ್ಲಿ ನೀಡಿದ್ದಾರೆ. ಸುಮಾರು 316 ಕೀರ್ತನೆಗಳು ಹಾಗೂ ಇನ್ನಿತರ ಸಾಹಿತ್ಯ ಮಾತ್ರ ಲಭ್ಯವಾಗಿರುವುದನ್ನು ಕಾಣಬಹುದಾಗಿದೆ. ಅವರ ಐದು ಮುಖ್ಯ ಕಾವ್ಯಕೃತಿಗಳು

೧. ಮೋಹನತರಂಗಿಣಿ
೨. ನಳಚರಿತ್ರೆ
೩. ರಾಮಧಾನ್ಯಚರಿತೆ
೪. ಹರಿಭಕ್ತಿಸಾರ
೫. ನೃಸಿಂಹಸ್ತವ (ದೊರೆತಿಲ್ಲ)

# ಆಧುನಿಕ ಕನ್ನಡ

## ಕನ್ನಡದ ನವೋದಯ -

ನವೋದಯ ಎಂದರೆ ಹೊಸ ಹುಟ್ಟು / ಹೊಸದು ಬ್ರಿಟಿಷ್ ಆಳ್ವಿಕೆಯ ಪ್ರಾರಂಭಿಕ ಹಂತಗಳಲ್ಲಿ ಹೆಚ್ಚು ಬೆಳಕು ಕಾಣದೆ ಇದ್ದ ಕನ್ನಡ ಸಾಹಿತ್ಯ ,೧೯ನೇ ಶತಮಾನದ ಕೊನೆಗೆ ಹಾಗೂ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಹೊಸ ಹುಟ್ಟು ಪಡೆಯಿತು. ಆಧುನಿಕ ಕನ್ನಡ ಕಾವ್ಯದ ಬೆಳವಣಿಗೆಗೆ ಕಾರಣವಾಯಿತು. ಈ ಹಂತದಲ್ಲಿ ಬಿ.ಎಂ.ಶ್ರೀಕಂಠಯ್ಯ , ಕುವೆಂಪು , ದ.ರಾ.ಬೇಂದ್ರೆ .ಶಿವರಾಮ ಕಾರಂತ ಮೊದಲಾದ ಶ್ರೇಷ್ಠ ಲೇಖಕರು ಬೆಳಕಿಗೆ ಬಂದರು.

ಈ ಕಾಲದ ಸಾಹಿತ್ಯ ಪ್ರಕಾರಗಳು ರೊಮ್ಯಾಂಟಿಕ್ ಇಂಗ್ಲೀಷ್ ಕಾವ್ಯ ಮತ್ತು ಗ್ರೀಕ್ ರುದ್ರ ನಾಟಕಗಳಿಂದ ಪ್ರಭಾವಿತವಾಯಿತು. ಈ ಘಟ್ಟದ ಬೆಳವಣಿಗೆಯನ್ನು ತಂದವರು ಬಿ.ಎಂ. ಶ್ರೀಕಂಠಯ್ಯ ತಮ್ಮ ಇಂಗ್ಲೀಷ್ ಗೀತೆಗಳ ಪುಸ್ತಕದೊಂದಿಗೆ. ಅನೇಕ ಸುಶಿಕ್ಷಿತ ಕನ್ನಡಿಗರು ,ಮುಖ್ಯವಾಗಿ ಶಿಕ್ಷಕ ವೃತ್ತಿಯಲ್ಲಿದ್ದವರು. ತಮ್ಮ ಮಾತೃಭಾಷೆಯಲ್ಲಿ ಬರೆಯುವುದರ ಮಹತ್ವವನ್ನು ಕಂಡುಕೊಂಡು ಕನ್ನಡ ಸಾಹಿತ್ಯಕ್ಕೆ ಪ್ರೇರಣೆಯನ್ನೊದಗಿಸಿದರು.

ಇದಕ್ಕೆ ಉದಾಹರಣೆಯಾಗಿ ಕುವೆಂಪು ತಮ್ಮ ಒಬ್ಬ ಶಿಕ್ಷಕರಿಂದ (ಬ್ರಿಟಿಷ್ ಮೂಲದವರು) ಕನ್ನಡದಲ್ಲಿ ಬರೆಯುವುದರ ಮಹತ್ವವನ್ನು ಕಂಡುಕೊಂಡು ಮುಂದೆ ರಾಷ್ಟ್ರಕವಿ ಬಿರುದಿಗೆ ಪಾತ್ರರಾದರು. ಅವರ ಪ್ರಕೃತಿ ಪ್ರೇಮ, ಮಾನವನ ಉನ್ನತಿಯಲ್ಲಿ ನಂಬಿಕೆ ಮತ್ತು ದೇವರ ಸೃಷ್ಟಿಕ್ರಮವನ್ನು ಕಾಣುವ ಅವರ ಮನಸ್ಸು ಅವರನ್ನು ಕನ್ನಡದ ಉತ್ತಮ ಕವಿಗಳಲ್ಲಿ ಒಬ್ಬರನ್ನಾಗಿ ಮಾಡಿದೆ. ಅವರ ಅತಿ ಪ್ರಸಿದ್ಧ ಕಾವ್ಯ ಕೃತಿ 'ಶ್ರೀ ರಾಮಾಯಣ ದರ್ಶನಂ' . ಇವರನ್ನು ಕನ್ನಡದ ವರ್ಡ್ಸ್‌ವರ್ಥ್ ಎಂದು ಕರೆಯಲಾಗುತ್ತೆ.

ಇದಕ್ಕೆ ಉದಾಹರಣೆಯಾಗಿ ನಿಂತಿರುವ ಮತ್ತೊಬ್ಬ ಲೇಖಕರೆಂದರೆ ಶಿವರಾಮ ಕಾರಂತರು, ಅತ್ಯಂತ ಬುದ್ಧಿಮತ್ತೆಯ, ಆಳವಾದ ಆದರ್ಶಗಳುಳ್ಳ ವ್ಯಕ್ತಿತ್ವ ಹಾಗೂ ಅಷ್ಟೇ ಆಳವಾದ ಸಾಮಾಜಿಕ ಕಳಕಳಿಯಿದ್ದ ಲೇಖಕರು. ಅವರ ಶಕ್ತಿಶಾಲಿ ಸಾಮಾಜಿಕ ಕಾದಂಬರಿಗಳಲ್ಲಿ ಪ್ರಸಿದ್ಧವಾದವು - ಚೋಮನ ದುಡಿ, ಬೆಟ್ಟದ ಜೀವ, ಮೈಮನದ ಸುಳಿಯಲ್ಲಿ, ಮರಳಿ ಮಣ್ಣಿಗೆ ಮತ್ತು ಮೂಕಜ್ಜಿಯ ಕನಸುಗಳು ಮೊದಲಾದವು.

ಶಿವರಾಮ ಕಾರಂತರನ್ನು 'ಕಡಲ ತೀರದ ಭಾರ್ಗವ' ಮತ್ತು 'ನಡೆದಾಡುವ ವಿಶ್ವಕೋಶ' ಎಂದು ಕರೆಯುತ್ತಾರೆ.

ಇದಕ್ಕೆ ಉದಾಹರಣೆಯಾಗಿ ನಿಂತಿರುವ ಇನ್ನೊಬ್ಬ ಲೇಖಕರೆಂದರೆ ದ.ರಾ.ಬೇಂದ್ರೆ. ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಕನ್ನಡದ ಪ್ರಸಿದ್ಧ ಕವಿ ಹಾಗೂ ಕಾದಂಬರಿಕಾರರು. ಬೇಂದ್ರೆಯವರು ಕರ್ನಾಟಕದಲ್ಲಿ ವರಕವಿಯೆಂದು ಪ್ರಸಿದ್ಧರಾಗಿದ್ದಾರೆ. ೧೯೭೩ ರಲ್ಲಿ ಬೇಂದ್ರೆಯವರ ಕವನ ಸಂಕಲನವಾದ ನಾಕುತಂತಿಗಾಗಿ ಭಾರತದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯಾದ ಜ್ಞಾನಪೀಠವನ್ನು ನೀಡಲಾಯಿತು ಹಾಗೂ ಬೇಂದ್ರೆಯವರು ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ.

## ಈ ಕಾಲದ ಪ್ರಸಿದ್ಧ ಕವಿಗಳು

ಕುವೆಂಪು, ಬಿ.ಎಂ.ಶ್ರೀಕಂಠಯ್ಯ, ದ.ರಾ.ಬೇಂದ್ರೆ, ಪು.ತಿ.ನರಸಿಂಹಾಚಾರ್, ಕೆ.ಎಸ್.ನರಸಿಂಹಸ್ವಾಮಿ, ಎಂ.ಗೋಪಾಲಕೃಷ್ಣ ಅಡಿಗ, ಚೆನ್ನವೀರ ಕಣವಿ, ಪ್ರೊ.ನಿಸಾರ ಅಹಮದ್, ಡಾ.ಚಂದ್ರಶೇಖರ ಕಂಬಾರ, ಡಿ.ವಿ.ಗುಂಡಪ್ಪ ಮೊದಲಾದವರು.

## ಈ ಕಾಲದ ಪ್ರಸಿದ್ಧ ಕಾದಂಬರಿಕಾರರು -

ಕುವೆಂಪು, ಶಿವರಾಮ ಕಾರಂತ, ಅ.ನ.ಕೃ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಯು. ಆರ್. ಅನಂತಮೂರ್ತಿ, ವಿ.ಕೃ. ಗೋಕಾಕ, ಡಿ.ವಿ. ಗುಂಡಪ್ಪ, ಎಸ್. ಎಲ್. ಭೈರಪ್ಪ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕೆ.ವಿ. ಅಯ್ಯರ್, ತೀ.ನಂ.ಶ್ರೀ, ಮಂಜೇಶ್ವರ ಗೋವಿಂದ ಪೈ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಮುಂತಾದವರು.

## ಈ ಕಾಲದ ಪ್ರಸಿದ್ಧ ನಾಟಕಕಾರರು -

ಟಿ.ಪಿ. ಕೈಲಾಸಂ, ಶ್ರೀರಂಗ, ಕುವೆಂಪು, ಬಿ.ಎಂ.ಶ್ರೀ, ಬಿ.ವಿ.ಕಾರಂತ ಮೊದಲಾದವರು.

# ನವ್ಯ

೧೯೪೭ ರ ಭಾರತ ಸ್ವಾತಂತ್ರ್ಯಾನಂತರ ಕನ್ನಡ ಸಾಹಿತ್ಯದಲ್ಲಿ ಇನ್ನೊಂದು ಹೊಸ ಸಾಹಿತ್ಯ ಪ್ರಕಾರದ ಉಗಮವಾಯಿತು.

ನವ್ಯ ಪ್ರಕಾರದ ಪಿತಾಮಹರೆಂದು ಗೋಪಾಲಕೃಷ್ಣ ಅಡಿಗ ನವ್ಯ ಕವಿಗಳು ನಿರಾಶಾವಾದಿ ಬುದ್ಧಿಜೀವಿಗಳಂತೆ ಕಾವ್ಯ ರಚಿಸಿದರು. ಭಾಷಾಪ್ರಯೋಗದ ಚಮತ್ಕಾರ ಹಾಗೂ ಕಾವ್ಯತಂತ್ರ ಹೊಸ ಎತ್ತರವನ್ನು ಈ ಪ್ರಕಾರದಲ್ಲಿ ಕಂಡಿತು.

## ನವ್ಯ ಸಾಹಿತ್ಯದ ಪ್ರಸಿದ್ಧ ಲೇಖಕರು -

ವಿ.ಕೃ. ಗೋಕಾಕ, ಗೋಪಾಲಕೃಷ್ಣ ಅಡಿಗ, ಬಿ.ಸಿ. ರಾಮಚಂದ್ರ ಶರ್ಮ, ಎಚ್. ಎಂ. ಚನ್ನಯ್ಯ, ಯು. ಆರ್. ಅನಂತಮೂರ್ತಿ, ಚಂದ್ರಶೇಖರ ಪಾಟೀಲ ಚಂದ್ರಶೇಖರ ಕಂಬಾರ.

## ಇತರ ಪ್ರಕಾರಗಳು

ಕಳೆದ ಏಳು ದಶಕಗಳಲ್ಲಿ ಕನ್ನಡ ಸಾಹಿತ್ಯದ ದಾರಿ ಸಾಮಾಜಿಕ ವಿಷಯಗಳನ್ನು ಕುರಿತಾಗಿದೆ. ಜಾತಿಪದ್ಧತಿಯ ತಾರತಮ್ಯಗಳಿಂದ ಬಂಡಾಯ ಮತ್ತು ದಲಿತ ಕಾವ್ಯ ಪ್ರೇರಿತವಾಗಿದೆ. ಸ್ತ್ರೀ ವಿಮೋಚನಾ ಚಳುವಳಿಗಳು ಸ್ತ್ರೀ ಕಾವ್ಯ ಪ್ರಕಾರಕ್ಕೆ ಎಡೆ ಮಾಡಿಕೊಟ್ಟವೆ. ಸಣ್ಣ ಕಥೆಗಳು ಹಾಗೂ ಭಾವಗೀತೆಗಳು ಸಹ ಇಪ್ಪತ್ತನೇ ಶತಮಾನದಲ್ಲಿ ಜನಪ್ರಿಯವಾದ ಸಾಹಿತ್ಯ ಪ್ರಕಾರಗಳು ರಾಜ್ಯದ ಹಲವಾರು ಲೇಖನ್ನು ಸ್ಥಳೀಯ ಭಾಷೆಯಲ್ಲಿ ಕಥೆ ಕಾದಂಬರಿ ಬರೆಯುವಲ್ಲಿ ಗುರುತಿಸಿಕೊಂಡವರು. ಅದರಲ್ಲಿ ಬಾಳಾಸಾಹೇಬ ಲೋಕಾಪುರ, ಅಮರೇಶ ನುಗಡೋಣಿ, ಶಂಕರ ಬೈಚಬಾಳ್, ಲೋಕೇಶ ಅಗಸನಕಟ್ಟೆ, ಸಿದ್ದಯ್ಯ ಪುರಾಣಿಕ ಮುಂತಾದವರನ್ನು ಹೆಸರಿಸಬಹುದು.

## ಪ್ರಶಸ್ತಿಗಳು

ಕನ್ನಡ ಸಾಹಿತ್ಯದ ಶಕ್ತಿಗೆ ಕನ್ನಡಿಯಾಗಿ ಕನ್ನಡ ಸಾಹಿತ್ಯಕ್ಕೆ ಇದುವರೆಗೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ. ಇದು ಭಾರತೀಯ ಭಾಷೆಗಳಲ್ಲಿ ಅತಿ ಹೆಚ್ಚು. ಕೇಂದ್ರ ಸಾಹಿತ್ಯ ಅಕಾಡೆಮಿ ನೀಡುವ ಅತ್ಯುನ್ನತ ಸಾಹಿತ್ಯ ಗೌರವವಿದು. ಆಗಸ್ಟ ೨೦೦೪ರವರೆಗೆ ಒಟ್ಟು ೪೬ ಕನ್ನಡ ಭಾರತ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಒಟ್ಟು ೮ ಜನರಿಗೆ ಭಾಷಾ ಸಮ್ಮಾನ್ ಗೌರವ ಕನ್ನಡ ಪ್ರಶಸ್ತಿ.

# ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು

| ಕ್ರಮ ಸಂಖ್ಯೆ | ಹೆಸರು | ಕೃತಿ | ವರ್ಷ |
|---|---|---|---|
| ೧ | ಶ್ರೀ. ಕುವೆಂಪು | ಶ್ರೀ ರಾಮಾಯಣ ದರ್ಶನಂ | 1967 |
| ೨ | ಶ್ರೀ ದ.ರಾ.ಬೇಂದ್ರೆ | ನಾಕುತಂತಿ | 1973 |
| ೩ | ಶ್ರೀ ಶಿವರಾಮ ಕಾರಂತ | ಮೂಕಜ್ಜಿಯ ಕನಸುಗಳು | 1977 |
| ೪ | ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ | ಚಿಕ್ಕವೀರ ರಾಜೇಂದ್ರ | 1983 |
| ೫ | ಶ್ರೀ. ಗಿರೀಶ ಕಾರ್ನಾಡ | ಕನ್ನಡ ಸಮಗ್ರ ಸಾಹಿತ್ಯ | 1998 |
| ೬ | ಶ್ರೀ. ವಿ.ಕೃ.ಗೋಕಾಕ | ಭಾರತ ಸಿಂಧು ರಶ್ಮಿ | 1990 |
| ೭ | ಶ್ರೀ ಡಾ.ಯು. ಆರ್. ಅನಂತಮೂರ್ತಿ | ಕನ್ನಡ ಸಮಗ್ರ ಸಾಹಿತ್ಯ | 1994 |
| ೮ | ಶ್ರೀ. ಚಂದ್ರಶೇಖರ. ಕಂಬಾರ | ಕನ್ನಡ ಸಮಗ್ರ ಸಾಹಿತ್ಯ | 2010 |

## ಸಂಬಂಧಿತ ಲೇಖನಗಳು

ಘಟಕ ಒಂದು - ಕನ್ನಡ ನಾಡು - ನುಡಿ ಪ್ರಜ್ಞೆ

೨. ಕರ್ನಾಟಕದ ಇತಿಹಾಸ ಮತ್ತು ಕನ್ನಡ ಸಾಹಿತ್ಯ - ಡಾ: ಎಂ. ಚಿದಾನಂದಮೂರ್ತಿ

ಪುಟ ಸಂಖ್ಯೆ - ೧೨

## ಅಂತರ್ಜಾಲ ತಾಣಗಳು

ಕರ್ನಾಟಕ ಸರ್ಕಾರದ ಅಧಿಕೃತ ಜಾಲತಾಣ

ಸ್ಪರ್ಧಾ ವಾಣಿ

ಸೊಬಗು - ಕನ್ನಡ ನಾಡಿನ ಸಿರಿ ಮಂಟಿಕೆ

ಕನ್ನಡ ಸಾಹಿತ್ಯದ ಚರಿತ್ರೆ

ಜ್ಞಾನಪೀಠ ಪುರಸ್ಕೃತ ಕನ್ನಡ ಸಾಹಿತಿಗಳು.

Principal,
G. P. Porwal Arts, Comm &
V. V. Salimath Sc. College
SINDGI-586128. College Code: 52

Coordinator IQAC
G. P. PORWAL ARTS, COM &
V. V. SALIMATH Sc. College
SINDGI-586128